# ಹಂಪಿ ಟೈಮ್ಸ್
HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

ಸಂಪುಟ:01 Volume:01 • ಸಂಚಿಕೆ:173 Issue:173 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 03.12.2023 • ಭಾನುವಾರ Sunday • ಪುಟ:04 Page:04 • ಬೆಲೆ:2 Rs:2










ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.


PLACE YOUR AD
HOUSE RENT / SALE / LEASE, CHANGE OF NAME,
Notice Advertisement. & EVENT COVERAGE
Contact
9448633038
Near Valmiki Circle,
HOSAPETE-583201
Email:hampitimes@gmail.com


# ಆಯುಷ್ ಇಲಾಖೆಗೆ ಬೇಕಿದೆ ಚಿಕಿತ್ಸೆ

## ಅಧಿಕಾರಿಗಳಿಗೆ ಖಡಕ್ ಎಚ್ಚರಿಕೆ ಕೊಟ್ಟ ಜಿಲ್ಲಾ ಉಸ್ತುವಾರಿ ಸಚಿವ ಬಿ.ನಾಗೇಂದ್ರ | ದೂರು ಬಂದ್ರೆ ಆಯಾ ಇಲಾಖೆ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ

**ಹಂಪಿ ಟೈಮ್ಸ್ ಬಳ್ಳಾರಿ**

ನನ್ನ ಉಸ್ತುವಾರಿ ಜಿಲ್ಲೆಯಲ್ಲಿ ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ, ಸಾರ್ವಜನಿಕರಿಂದ ದೂರು ಬಂದರೆ ಸುಮ್ಮನಿರುವುದಿಲ್ಲ, ಅಂತಹ ಇಲಾಖೆಯ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಯುವ ಸಬಲೀಕರಣ, ಕ್ರೀಡೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ನಾಗೇಂದ್ರ ಅವರು ಎಚ್ಚರಿಸಿದರು.

ಶನಿವಾರ, ನಗರದ ಜಿಲ್ಲಾ ಪಂಚಾಯತ್ ನಜೀರ್ ಸಾಬ್ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಜಿಲ್ಲಾ ಮಟ್ಟದ ಕರ್ನಾಟಕ ಅಭಿವೃದ್ಧಿ ಎರಡನೇ (ವಾರ್ಷಿಕ) ತ್ರೈಮಾಸಿಕ (ಕೆಡಿಪಿ) ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲಾ ಆಯುಷ್ ಇಲಾಖೆಯಲ್ಲಿ ಔಷಧಿ ವಿತರಣೆ ಹಾಗೂ ಚಿಕಿತ್ಸೆಗೆ ಸಂಬಂಧಿಸಿದಂತೆ, ಸಾರ್ವಜನಿಕರಿಂದ ಸಾಕಷ್ಟು ದೂರುಗಳು ಕೇಳಿ ಬರುತ್ತಿವೆ. ಇಲಾಖೆಯ ಪ್ರಗತಿಯ ಬಗ್ಗೆ ಸಮರ್ಪಕ ಮಾಹಿತಿ ನೀಡುತ್ತಿಲ್ಲ, ಏಕೆ? ಎಂದು ಸಚಿವ ಬಿ.ನಾಗೇಂದ್ರ ಅವರು, ಜಿಲ್ಲಾ ಆಯುಷ್ ಇಲಾಖೆಯ ಅಧಿಕಾರಿಯನ್ನು ಪ್ರಶ್ನಿಸಿದರು.

ಜಿಲ್ಲೆಯಲ್ಲಿ ಶಿಶು ಮರಣ ಪ್ರಮಾಣ ತಗ್ಗಿಸಲು ಕ್ರಮ ವಹಿಸಬೇಕು. ಭ್ರೂಣ ಹತ್ಯೆ ಪತ್ತೆಹಚ್ಚುವುದು ತಡೆಗಟ್ಟಬೇಕು ಹಾಗೂ ಕೆಲವು ಆಸ್ಪತ್ರೆಗಳಲ್ಲಿ ಹಣ ಪಡೆದುಕೊಂಡು ಸೇವೆ ನೀಡುತ್ತಿರುವುದು ಕಂಡುಬರುತ್ತಿದ್ದು, ಈ ಕುರಿತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ನಿಗಾ ವಹಿಸಬೇಕು ಎಂದು ಸಚಿವ ಬಿ.ನಾಗೇಂದ್ರ ಅವರು ಸೂಚಿಸಿದರು.

ಕಂಪ್ಲಿ ಶಾಸಕ ಜೆ.ಎನ್.ಗಣೇಶ್ ಅವರು ಮಾತನಾಡಿ, ರಾತ್ರಿ ಸಮಯದಲ್ಲಿ ತುರ್ತು ಸೌಲಭ್ಯಕ್ಕಾಗಿ ಆಸ್ಪತ್ರೆಗಳ ಶುಶೂಷ್ರಕರಿಗೆ ಕರೆ ಮಾಡಿದಾಗ, ಶಾಸಕರ ಕರೆ ಎಂಬುದು ಲೆಕ್ಕಿಸದೇ, ಕರೆ ಸ್ವೀಕರಿಸುವುದಿಲ್ಲ ಎಂದು ಹೇಳಿದರು. ಇದಕ್ಕೆ ಸಚಿವ ಬಿ.ನಾಗೇಂದ್ರ ಮಾತನಾಡಿ, ಯಾರಿಗಾದರೂ ಅಪಘಾತವಾದರೆ, ಅವರನ್ನು ಸಂಪರ್ಕಿಸಿದರೆ, ಕರೆ ಸ್ವೀಕರಿಸುವುದಿಲ್ಲ ಎಂದರೆ ಏನು ಅರ್ಥ? ವೈದ್ಯಾಧಿಕಾರಿಗಳು ಕೇಂದ್ರಸ್ಥಾನದಲ್ಲಿದ್ದುಕೊಂಡು ಕರ್ತವ್ಯ ನಿರ್ವಹಿಸಬೇಕು ಎಂದು ಸೂಚಿಸಿದರು.

ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಅನುಷ್ಠಾನಗೊಳಿಸುತ್ತಿರುವ ವಿವಿಧ ಬ್ಯಾಚ್‌ಗಳ ಕುಡಿಯುವ ನೀರಿನ ಯೋಜನೆಗಳು ಸಮರ್ಪಕವಾಗಿ ಕಾರ್ಯರೂಪಕ್ಕೆ ಬರುತ್ತಿಲ್ಲ ಎಂದು ಸಚಿವ ಬಿ.ನಾಗೇಂದ್ರ ಅವರು ಕಳವಳ ವ್ಯಕ್ತಪಡಿಸಿದರು.





ಈ ಕುರಿತು ಮಧ್ಯಪ್ರವೇಶಿಸಿದ ಕಂಪ್ಲಿ ಶಾಸಕ ಜೆ.ಎನ್. ಗಣೇಶ್, ಸರ್ಕಾರ ಕುಡಿಯುವ ನೀರಿನ ಯೋಜನೆಗೆ ಸಾಕಷ್ಟು ಹಣ ವ್ಯಯ ಮಾಡುತ್ತಿದೆ, ಆದರೆ ಹಣ ದುರುಪಯೋಗವಾಗುವುದು ತಪ್ಪುತ್ತಿಲ್ಲ, ಮತ್ತು ರಸ್ತೆಗಳು ದುರಸ್ಥಿಗೊಳ್ಳುತ್ತಿರುವುದು ತಪ್ಪುತ್ತಿಲ್ಲ ಎಂದು ವಿಷಾದ ವ್ಯಕ್ತಪಡಿಸಿದರು.

ಬಳ್ಳಾರಿ ತಾಲ್ಲೂಕಿನ ಹರಗಿನಡೋಣಿ, ಜಾನಕುಂಟೆ ಹಾಗೂ ಬೆಳಗಲ್ಲು ಗ್ರಾಮಗಳಿಗೆ ಬರುವ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರಲಿದ್ದು, ಅಲ್ಲಿಪುರ ಕೆರೆಯಿಂದ ಪೈಪ್‌ಲೈನ್ ವ್ಯವಸ್ಥೆ ಕೈಗೊಂಡು ಹರಗಿನಡೋಣಿಯ ಕೆರೆಯಲ್ಲಿ ನೀರು ಸಂಗ್ರಹಿಸುವ ಕೆಲಸ ಮಾಡಬೇಕು ಎಂದು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ಪ್ರತಿ ತಾಲ್ಲೂಕಿನಲ್ಲಿ ಕೆಟ್ಟು ಹೋಗಿರುವ ಆರ್‌ಓ ಘಟಕಗಳನ್ನು ಗುರುತಿಸಿ, ಅವುಗಳ ದುರಸ್ಥಿಗೆ ಕ್ರಮ ವಹಿಸಬೇಕು. ಅರ್ಹ ಗುತ್ತಿಗೆದಾರರರಿಗೆ ಕಾಮಗಾರಿ ನೀಡಬೇಕು. ಜನರಿಗೆ ಕುಡಿಯುವ ನೀರಿಗೆ ಯಾವುದೇ ರೀತಿಯ ತೊಂದರೆಯಾಗಬಾರದು ಎಂದು ಸಚಿವ ಬಿ.ನಾಗೇಂದ್ರ, ತಾಪಂ ಇಓಗಳು ಹಾಗೂ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಸಹಾಯಕ ಇಂಜಿಯರ್‌ಗಳಿಗೆ ಸೂಚಿಸಿದರು.

ಜಿಲ್ಲೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಪೂರ್ಣ ಮಾಹಿತಿ ನೀಡುವುದು ಸರಿಯಲ್ಲ. ಅಧಿಕಾರಿಗಳು ಮುಂದಿನ ಸಭೆಯಲ್ಲಿ ಸಂಪೂರ್ಣ ಮಾಹಿತಿಯನ್ನು ನೀಡಬೇಕು. ಇಲ್ಲದಿದ್ದಲ್ಲಿ ಶಿಸ್ತಿನ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದರು. ಸಭೆಯಲ್ಲಿ ಗೈರು ಹಾಜರಾದವರಿಗೆ ನೋಟಿಸ್ ಜಾರಿ ಮಾಡಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಇದೇ ಸಂದರ್ಭದಲ್ಲಿ ಜಿಲ್ಲೆಯಲ್ಲಿ ಇಎಸ್‌ಐ ಆಸ್ಪತೆ ನಿರ್ಮಾಣಕ್ಕೆ ಸ್ಥಳ ಮಂಜೂರಾತಿ ಕುರಿತು, >>3

## ಮೈಕ್ರೋ ನ್ಯೂಸ್

### ವಿಎಸ್‌ಕೆ ವಿವಿಯ ಆದಿತ್ಯಗೆ ಕುಸ್ತಿಯಲ್ಲಿ ಕಂಚಿನ ಪದಕ




**ಹಂಪಿ ಟೈಮ್ಸ್ ಬಳ್ಳಾರಿ**

ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಕುಸ್ತಿ ತಂಡದ ಆದಿತ್ಯ (ವೀರಶೈವ ಮಹಾವಿದ್ಯಾಲಯ) ಚಂ-ಡಿಗಡ ವಿಶ್ವವಿದ್ಯಾಲಯದಲ್ಲಿ ಜರುಗಿದ ದಕ್ಷಿಣ ಪಶ್ಚಿಮ ವಲಯ ಅಂತರ ವಿಶ್ವವಿದ್ಯಾಲಯ ಪುರುಷ ಮತ್ತು ಮಹಿಳಾ ಕುಸ್ತಿ (ಗ್ರೀಕೊ ರೋಮನ್ 87 ಕೆಜಿ) ಪಂದ್ಯಾವಳಿಯಲ್ಲಿ ವಿಶ್ವವಿದ್ಯಾಲಯವನ್ನು ಪ್ರತಿನಿಧಿಸಿ ಕಂಚಿನ ಪದಕವನ್ನು ಪಡೆಯುವುದರ ಮೂಲಕ ವಿಶ್ವವಿದ್ಯಾಲಯದ ಕೀರ್ತಿಯನ್ನು ಹೆಚ್ಚಿಸಿರುತ್ತಾನೆ ಅದರ ಜೊತೆ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಕುಸ್ತಿ ಪಂದ್ಯಾವಳಿಗೆ ಆಯ್ಕೆಯಾಗಿದ್ದಾನೆ.

### ಲೋಕಾಯುಕ್ತರ ಜನ ಸಂಪರ್ಕ ಸಭೆ, ಅಹವಾಲು ಸ್ವೀಕಾರ ಡಿ.08 ಮತ್ತು 13ರಂದು

**ಹಂಪಿ ಟೈಮ್ಸ್ ಬಳ್ಳಾರಿ**

ಕರ್ನಾಟಕ ಲೋಕಾಯುಕ್ತ ಪೋಲಿಸ್ ಬಳ್ಳಾರಿ ವಿಭಾಗದ ಪೊಲೀಸ್ ಅಧೀಕ್ಷಕ ಎಂ.ಎನ್.ಶಶಿಧರ ಅವರ ಮಾರ್ಗದರ್ಶನದಲ್ಲಿ ಪೋಲೀಸ್ ನಿರೀಕ್ಷಕರಾದ ಸಂಗಮೇಶ್ ಮತ್ತು ಮಹಮ್ಮದ್ ರಫಿ ಇವರ ನೇತೃತ್ವದಲ್ಲಿ ಜಿಲ್ಲೆಯ ಕಂಪ್ಲಿ, ಬಳ್ಳಾರಿ, ತಾಲೂಕು ಕೇಂದ್ರಗಳಲ್ಲಿ ಸಾರ್ವಜನಿಕರಿಂದ ಕುಂದುಕೊರತೆಗಳ ಅಹವಾಲುಗಳ ಸ್ವೀಕಾರ/ ಜನ ಸಂಪರ್ಕ ಸಭೆ ನಡೆಸುವರು.

ಡಿ.08 ರಂದು ಬೆಳಿಗ್ಗೆ 11.30ರಿಂದ ಮಧ್ಯಾಹ್ನ 02ರವರೆಗೆ ಕಂಪ್ಲಿ ತಹಶೀಲ್ದಾರರ ಕಚೇರಿಯ ಸಭಾಂಗಣ ಮತ್ತು ಡಿ.13ರಂದು ಬೆಳಿಗ್ಗೆ 11.30ರಿಂದ ಮಧ್ಯಾಹ್ನ 02ರವರೆಗೆ ಬಳ್ಳಾರಿ ತಹಶೀಲ್ದಾರರ ಕಚೇರಿಯ ಸಭಾಂಗಣದಲ್ಲಿ ಲೋಕಾಯುಕ್ತರ ಜನ ಸಂಪರ್ಕ ಸಭೆ ನಡೆಯಲಿದೆ.

ಕುಂದು ಕೊರತೆಗಳಿರುವ ಸಾರ್ವಜನಿಕರು ನಿಗದಿತ ದಿನ ಮತ್ತು ಸ್ಥಳದಲ್ಲಿ ತಮ್ಮ ದೂರು ಅರ್ಜಿಗಳನ್ನು ನೀಡಬಹುದು. ಅಹವಾಲುಗಳಿರುವ ಅರ್ಜಿಗಳನ್ನು ಸ್ವೀಕರಿಸಿ ವಿಚಾರಿಸಲಾಗುತ್ತದೆ. ಕರ್ನಾಟಕ ಲೋಕಾಯುಕ್ತ ಬೆಂಗಳೂರು ವಿಭಾಗ ಲೋಕಾಯುಕ್ತರಿಗೆ ಅರ್ಜಿ ಸಲ್ಲಿಸಲು ನಮೂನೆ/ಫಾರಂ ನಂ:01 ಮತ್ತು 02 ಗಳನ್ನು ಸಹ ನೀಡಲಾಗುವುದು ಎಂದು ಕರ್ನಾಟಕ ಲೋಕಾಯುಕ್ತ ಬಳ್ಳಾರಿ ವಿಭಾಗದ ಪೊಲೀಸ್ ಅಧೀಕ್ಷಕ ಎಂ.ಎನ್.ಶಶಿಧರ ತಿಳಿಸಿದ್ದಾರೆ.

# ಪೊಲೀಸರ ಭದ್ರತೆಯಲ್ಲಿ ಗೂಡಂಗಡಿಗಳ ತೆರವು




**ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ**

ಪಟ್ಟಣದಲ್ಲಿ ಹೆಚ್ಚುತ್ತಿರುವ ಜನಸಂದಣಿ ಹಾಗೂ ಸಾರ್ವಜನಿಕರ ಅನುಕೂಲಕ್ಕಾಗಿ ರಸ್ತೆ ಅತಿಕ್ರಮಣ ಮಾಡಿದ ಅಂಗಡಿಗಳ ತೆರವು ಕಾರ್ಯಕ್ಕೆ ಮುಂದಾಗಿದ್ದು ಪ.ಪಂ. ಶನಿವಾರ ಮುಂಜಾನೆ ಬೆಳ್ಳಂ ಬೆಳಿಗ್ಗೆ ಜೆಸಿಬಿ ಸದ್ದು ಮಾಡಿದೆ.

ಇಂದು ಮುಂಜಾನೆ ಪ.ಪಂ.ಹಾಗು ಕಾಕಿಪಡೆಗಳೊಂದಿಗೆ ಜೆಸಿಬಿ ವಾಹನಗಳು ಕಾರ್ಯಾಚರಣೆಗೆ ಮುಂದಾಗಿದ್ದೇ ತಡ ಗೂಡಂಗಡಿಗಳ ಮಾಲೀಕರು ತಮ್ಮ ತಮ್ಮ ಅಂಗಡಿ ಮುಂಗಟ್ಟುಗಳನ್ನು ತೆರವುಗೊಳಿಸಲು ಹರಸಾಹಸ ಪಡುವಂತಾಯಿತು. ರಾಜ್ಯ ಹೆದ್ದಾರಿ ಅಕ್ಕ ಪಕ್ಕದಲ್ಲಿ ಅನಧಿಕೃತವಾಗಿ ಹಾಕಲಾಗಿದ್ದ ಚಿಕನ್ ಮತ್ತು ಮಾಂಸದ, ತರಕಾರಿ ಗೂಡಂಗಡಿಗಳನ್ನು ಈಗಾಗಲೇ ರಸ್ತೆ ಅಗಲೀಕರಣಕ್ಕೆ ಸಂಬಂಧಿಸಿದಂತೆ ಹಲವು ಬಾರಿ ಸಂಬಂಧಪಟ್ಟವರಿಗೆ ಗೂಡಂಗಡಿಗಳ ತೆರವಿಗೆ ಸೂಚನೆ ನೀಡಲಾಗಿದ್ದರೂ ಕೂಡ ಎಚ್ಚೆತ್ತುಕೊಳ್ಳದ ಗೂಡಂಗಡಿಗಳ ಮಾಲೀಕರು ಜೆಸಿಬಿಗಳು ಬಂದು ನಿಂತದ್ದೇ ತಡ ತಮ್ಮ ತಮ್ಮ ಅಂಗಡಿಗಳನ್ನು ತೆರವುಗೊಳಿಸಲು ಕೆಲವರು ಹರಸಾಹಸ ಪಟ್ಟರೆ, ಕೆಲವರು ಅಧಿಕಾರಿಗಳೊಂದಿಗೆ ವಾಗ್ವಾದಕ್ಕಿಳಿದರು.

> ಪಟ್ಟಣದ ಮುಖ್ಯಬೀದಿಯ ಇಕ್ಕೆಲಗಳಲ್ಲಿನ ಚಿಕನ್, ಮಾಂಸದ ಹಾಗು ತರಕಾರಿ ಅಂಗಡಿಗಳ ತ್ಯಾಜ್ಯಾದಿಂದ ಬೀಡಾಡಿಜಾನುವಾರುಗಳು,ಬೀದಿನಾಯಿಗಳ ಉಪಟಳದ ಕುರಿತು ಸಾರ್ವಜನಿಕರ ದೂರಿನ ಮೇರೆಗೆ ಹಾಗು ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ಒಟ್ಟು 38 ಅಂಗಡಿಗಳಲ್ಲಿ 27 ಚಿಕನ್ ಅಂಗಡಿ ಮತ್ತು 11 ತರಕಾರಿಗಳನ್ನ ತೆರವುಗೊಳಿಸಲಾಗಿದೆ.
> – **ಗಾದಿಲಿಂಗನಗೌಡ,** ಮುಖ್ಯಾಧಿಕಾರಿ.

ಕಾರ್ಯಾಚರಣೆಯಲ್ಲಿ ಪ.ಪಂ.ಮುಖ್ಯಾಧಿಕಾರಿ ಗಾದಿಲಿಂಗನಗೌಡ, ಹ.ಬೊ.ಹಳ್ಳಿ ಸಿ.ಪಿ.ಐ. ವಿಕಾಸ್ ಲಮಾಣಿ ಹಾಗು ಪಟ್ಟಣದ ಪಿ.ಎಸ್.ಐ.ಗಳಾದ ಮೌನೇಶ್ ರಾಥೋಡ್, ಬೀಬಿಮರೆಮ್ ಸೇರಿದಂತೆ ಪ.ಪಂ. ಸಿಬ್ಬಂದಿ ಹಾಗೂ ಪೊಲೀಸ್ ಭದ್ರತಾಪಡೆ ಹಾಜರಿದ್ದು ಕಾರ್ಯಾಚರಣೆ ನಡೆಸಿದರು.

**ಭದ್ರತೆ:** ಗೂಡಂಗಡಿಗಳ ತೆರವಿಗೆ ಹ.ಬೊ.ಹಳ್ಳಿ ವೃತ್ತದ ಮೂವರು ಪಿ.ಎಸ್.ಐ.ಗಳು, ಇಬ್ಬರು ಎ.ಎಸ್.ಐಗಳು, 12 ಮುಖ್ಯಪೇದೆ, ಪೇದೆಗಳು,1 ಜಿಲ್ಲಾಸಶಸ್ತ್ರಪಡೆ, ಮಹಿಳಾ ಸಿಬ್ಬಂದಿಗಳು ಸೇರಿದಂತೆ ಖಾಕಿಪಡೆ ತೆರವು ಕಾರ್ಯಾಚರಣೆಯಲ್ಲಿ ಭದ್ರತೆ ಒದಗಿಸಿದ್ದರು.




ಹಂಪಿ ಟೈಮ್ಸ್
ಸಂ|ಪಾ|ದ|ಕೀ|ಯ

# ಮನೆಯಲ್ಲಿ ಮಕ್ಕಳ ಕೈಗಳಿಗೆ ಎಂದಿಗೂ ಕೊಡದಿರಿ ಮೊಬೈಲ್

ಮೊಬೈಲ್ ಎಂಬುದೀಗ ಉಪಯೋಗಕ್ಕಿಂತ, ಅದರಿಂದಾಗುವ ಅಪಾಯಗಳನ್ನು ಹೆಚ್ಚೆಚ್ಚು ಸೃಷ್ಟಿ ಮಾಡುತ್ತಿದೆ. ಮೊಬೈಲ್‌ನಿಂದ ಅನುಕೂಲಗಳು ಇಲ್ಲದೇನಿಲ್ಲ. ಹೊಸ ಕಾಲಮಾನಕ್ಕೆ, ಹೊಸ ಅನ್ವೇಷಣೆಗಳಿಗೆ, ಹೊಸ ಜೀವನಕ್ಕೆ ನಾವು ತೆರೆದುಕೊಳ್ಳಲೇಬೇಕಿದೆ. ಅದರಿಂದ ಆಗುತ್ತಿರುವ ಉಪಯೋಗಗಳು ಹಲವಾರು. ಆದರೆ, ಅದರಿಂದ ಆಗುತ್ತಿರುವ ದುಷ್ಪರಿಣಾಮಗಳು ಅದಕ್ಕಿಂತಲೂ ಹೆಚ್ಚು ಮತ್ತು



ಆತಂಕಕಾರಿ. ಸಾರ್ವಜನಿಕ ಜೀವನ ದಲ್ಲಿ, ಅಂದರೆ ಮದುವೆ, ಗೃಹಪ್ರವೇಶ ಮತ್ತು ಹಲವು ಕಾರ್ಯಕ್ರಮಗಳಲ್ಲಿ ನಾವು ನೀವೆಲ್ಲ ನೋಡಿರುತ್ತೇವೆ. ಅಲ್ಲಿ ಮಕ್ಕಳು ಹಠ ಮಾಡಿದರೆ ಅವರಿಗೆ ಪೋಷಕರು–ಪಾಲಕರು ತಮ್ಮಲ್ಲಿರುವ ಮೊಬೈಲನ್ನು ಕೊಟ್ಟು ಸುಮ್ಮನಿರಿಸುತ್ತಾರೆ. ಆಗ ಮಕ್ಕಳು ಸುಮ್ಮನಾಗುತ್ತಾರೆ. ಇದು ಆರಂಭಿಕ ಹಂತ. ಒಮ್ಮೆ ಮೊಬೈಲ್ ಪ್ರಪಂಚಕ್ಕೆ ಒಳಗೆ ಹೋದ ಮಗು ಮತ್ತೆಂದೂ ಅದರಿಂದ ಹೊರಗೆ ಬರುವುದಿಲ್ಲ. ಹಠ ಮಾಡಿದರೆ ಮೊಬೈಲ್ ಬರುತ್ತದೆ ಎಂಬ ಮೊಂಡುತನದಿಂದ ಮಕ್ಕಳು ಪಾಲಕರು–ಪೋಷಕರ ಮುಂದೆ ಬೇಕಾಗಿಯೇ ರಂಪಾಟ ಮಾಡುತ್ತಾರೆ. ಹೀಗೆಯೇ ಇದು ಮುಂದುವರಿದರೆ ಮೊಬೈಲ್ ಎಂಬುದು ಮಕ್ಕಳಿಗೆ ಒಂಥರಾ ಡ್ರಗ್ಸ್‌ಗಿಂತಲೂ ದೊಡ್ಡ ವ್ಯಸನದಲ್ಲಿ ಬೀಳುತ್ತಾರೆ. ಮುಂದೊಂದು ದಿನ ಅದು ಮಾನಸಿಕ ರೋಗಕ್ಕೂ ದಾರಿ ಮಾಡಿಕೊಡುತ್ತದೆ. ಆಗ ನಮ್ಮ ಮಕ್ಕಳನ್ನು ಜೋಪಾನ ಮಾಡಲು ಪಾಲಕರು–ಪೋಷಕರಿಗೆ ಸಾಧ್ಯವಾಗುವುದಿಲ್ಲ. ಏಕೆಂದರೆ ಪರಿಸ್ಥಿತಿ ಕೈಮೀರಿ ಹೋಗಿರುತ್ತದೆ. ಅಷ್ಟಕ್ಕೂ ಮೊಬೈಲ್‌ನಲ್ಲಿ ನೋಡುವಂಥದು ಮಕ್ಕಳಿಗೆ ಏನೂ ಇರುವುದಿಲ್ಲ. ದೊಡ್ಡವರಾದರೆ ಅದು ಬೇರೆ ಮಾತು. ನಾವೇ ನಮ್ಮ ಕೈಯಾರೆ ನಮ್ಮ ಮಕ್ಕಳಿಗೆ ಮೊಬೈಲ್ ಕೊಡಿಸುವ ಮೂಲಕ ಅವರನ್ನು ದಾರಿ ತಪ್ಪುವಂತೆ ಮಾಡುತ್ತೇವೆ ಮತ್ತು ಮಾಡುತ್ತಿದ್ದೇವೆ. ಮೊಬೈಲಿನಿಂದ ಅವರ ಓದಿನ ಆಸಕ್ತಿ ಕುಂಠಿತವಾಗುತ್ತದೆ. ಕಣ್ಣುಗಳಿಗೆ ಬಹುಬೇಗನೇ ಕನ್ನಡಕ ಬರುತ್ತದೆ. ಮಾನಸಿಕ ಖಿನ್ನತೆ ಶುರುವಾಗುತ್ತದೆ. ಒಂಟಿತನ ಅಭ್ಯಾಸವಾಗುತ್ತದೆ ಮತ್ತು ಸ್ನೇಹಿತರು ಬೇಡವಾಗುತ್ತಾರೆ. ಆಟಗಳಲ್ಲಿ ಆಸಕ್ತಿ ಕಡಿಮೆಯಾಗುತ್ತದೆ. ಇದರಿಂದ ದೈಹಿಕ ಬೆಳವಣಿಗೆ ಕೂಡಾ ಕುಂಠಿತವಾಗುತ್ತದೆ. ಇವೆಲ್ಲ ಒಂದೆರಡು ದಿನಗಳಲ್ಲಿ ಕಾಣಿಸವುಂಥದಲ್ಲ. ಆದರೆ, ನಿಧಾನಗತಿಯಲ್ಲಿ ಇವೆಲ್ಲ ನಿಮ್ಮ ಮಕ್ಕಳನ್ನು ಆಕ್ರಮಿಸುತ್ತವೆ. ಅದರಿಂದ ಹೊರಬರಲು ಮಕ್ಕಳೂ ಸೇರಿದಂತೆ ಪಾಲಕರು–ಪೋಷಕರು ಏನು ಮಾಡಿದರೂ ಪ್ರಯೋಜನವಾಗುವುದಿಲ್ಲ. ಹಾಗಂತ ಮಕ್ಕಳು ಹಠ ಮಾಡಿದರೆ ಏನು ಮಾಡೋಕಾದೀತು ಎಂಬ ಪ್ರಶ್ನೆ ನಿಮ್ಮದಾದರೆ ಉತ್ತರವೂ ಇದೆ. ನೀವೋ ಒಂದೊಮ್ಮೆ ಮಕ್ಕಳಾಗಿದ್ದಿರಿ ಎಂಬುದುನ್ನು ನೆನಪಿಸಿಕೊಳ್ಳುತ್ತಾ, ಆಗ ನಿಮ್ಮ ಪಾಲಕರು–ಪೋಷಕರು ನಿಮ್ಮನ್ನು ಹೇಗೆ ಸಂತೈಸುತ್ತಿದ್ದರು ಎಂಬುದನ್ನು ಜ್ಞಾಪನ ಮಾಡಿಕೊಳ್ಳಿ. ಆಗೆಲ್ಲ ಮೊಬೈಲ್ ಇರಲಿಲ್ಲ. ಆಗ ನಿಮ್ಮ ತಂದೆ–ತಾಯಿ ನಿಮ್ಮನ್ನು ಸಂತೈಸಲಿಲ್ಲವೇ ? ಈಗ ಕಾಲಮಾನ ಬದಲಾಗಿರಬಹುದು, ಮೊಬೈಲ್ ಮತ್ತು ಇನ್ನೇನೋ ಬಂದಿರಬಹುದು. ಆದರೆ, ತಂದೆ–ತಾಯಿ ಮಕ್ಕಳು ಬದಲಾಗಿಲ್ಲ ಮತ್ತು ಬದಲಾಗುವುದೂ ಇಲ್ಲ. ನೀವೇ ನಿಮ್ಮ ಮಕ್ಕಳನ್ನು ಬದಲಾಯಿಸುತ್ತಿದ್ದೀರಿ ಎಂಬುದುನ್ನು ಮರೆಯದಿರಿ. ಮಕ್ಕಳನ್ನು ಮಕ್ಕಳಂತೆ ಬೆಳೆಸಿ. ಅವರನ್ನು ಆಟವಾಡಲಿಕ್ಕೆ ಬಿಡಿ. ನಡೆದಾಡಲು ಬಿಡಿ, ಓಡಾಡಲು ಬಿಡಿ, ಸ್ನೇಹಿತರೊಂದಿಗೆ ಮಾತನಾಡಲು ಬಿಡಿ, ಬೀದಿಯಲ್ಲಿ ನಾನಾ ರೀತಿಯ ದೈಹಿಕ ಕಸರತ್ತು ಇರುವ ಆಟಗಳನ್ನು ಆಡಲು ಬಿಡಿ. ಇದರಿಂದ ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳವಣಿಗೆ ಆಯಾ ವಯಸ್ಸು ತಕ್ಕಂತೆ ಪ್ರಗತಿ ಕಾಣುತ್ತದೆ. ದೊಡ್ಡವರಾದ ಮೇಲೆ ಅವರಿಷ್ಟ, ಏನಾದರೂ ಮಾಡಿಕೊಳ್ಳಲಿ. ಏಕೆಂದರೆ ಅವರಿಗೆ ಆ ವಯಸ್ಸಿನ ತಿಳಿವಳಿಕೆ ಬಂದಿರುತ್ತದೆ. ತಪ್ಪು ಮತ್ತು ಸರಿ ನಡುವಿನ ಅಂತರ ಗೊತ್ತಿರುತ್ತದೆ. ಆದರೆ, ಈ ಚಿಕ್ಕವಯಸ್ಸಿನಲ್ಲೇ ಮಕ್ಕಳ ಕೈಲಿ ಮೊಬೈಲ್ ಕೊಟ್ಟು ಅವರನ್ನು, ಅವರ ದೈಹಿಕ ಬೆಳವಣಿಗೆಯನ್ನು, ಅವರ ಮಾನಸಿಕ ಆರೋಗ್ಯವನ್ನು, ಅವರ ಭವಿಷ್ಯವನ್ನು ನೀವೇ ಹಾಳು ಮಾಡೋದು ಬೇಡ

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com

# ಮಗುವಿಗೆ ಏನನ್ನೂ ಕಲಿಸಲು ಸಾಧ್ಯವಿಲ್ಲ!



ಒಮ್ಮೆ ನೋಡಿದರೆ ಈ ಮೇಲಿನ ವ್ಯಾಖ್ಯೆ ಸ್ವಲ್ಪ ಅತಿಯಾಯ್ತು ಅನಿಸುತ್ತದೆ ಅಲ್ಲವೆ? ಹೌದು ಅದು ಸಹಜ, ನಾವೀಗ ಇದನ್ನು ಎರಡು ರೀತಿಯಲ್ಲಿ ನೊಡೋಣ.

**ವಿಚಾರ–1**

ನಾವು ಸಣ್ಣವರಿದ್ದಾಗ ನಮ್ಮ ನೆರೆಹೊರೆಯಲ್ಲಿ ಯಾರೋ ಒಬ್ಬರು ಮಹಾಶಯ ಹೇಳುತ್ತಿದ್ದನಂತೆ "ಹೇಳಿ ನೀವು ನಿಮ್ಮ ಮಗುವನ್ನು ನನ್ನ ಕೈಗೆ ನೀಡಿಬಿಡಿ ಹಾಗೆಯೆ ಹೇಳಿ ನಿಮಗೆಂತ ಮಗುಬೇಕು/ ಅಂದರೆ ನಿಮ್ಮ ಮಗುವನ್ನು ನೀವು ಏನಾಗಿ ನೋಡಬಯಸಿತ್ತೀರಿ? ಡಾಕ್ಟರ್, ಎಂಜಿನೀಯರ್, ಪೊಲಿಟಿಸಿಯನ್ ಹೇಳಿ ನೀವು ಏನು ಬಯಸಿತ್ತೀರೊ ಹಾಗೆಯೇ ನಾನು ಅವರನ್ನು ಬೆಳಸಬಲ್ಲೆ! ಮತ್ತು ಅವರಿಗೆ ಕಲಿಸಬಲ್ಲೆ ಎಂದಿದ್ದನಂತೆ" ನನಗೂ ಸಹ ಈ ವ್ಯಾಖ್ಯೆಯನ್ನು ಕೇಳಿದಾಗ ಸ್ವಲ್ಪ ಅತಿಯಾಯ್ತು ಅನಿಸಿದ್ದಲ್ಲದೆ, ಹಾಗೆಯೆ ಇದ್ದರು ಇರಬಹುದೇನೋ ಅನಿಸಿದ್ದು ಸುಳ್ಳಲ್ಲ.

ಅಂದರೆ ಮಕ್ಕಳ ಮುಗ್ಧತೆಯನ್ನು ಹೇಳುವಾಗ ಇವರು ತುಸು ಹೆಚ್ಚಾಗಿ ಹೇಳಿದ್ದಾರೆ ಅನಿಸುತ್ತದೆ ಅಲ್ಲವೆ. ನಾನು ನೋಡಿದ ಮತ್ತು ಕೇಳಿದ, ಓದಿದ, ಹಾಗೆಯೆ ನನ್ನ ಸ್ವಂತ ಅನುಭವದ ಆಧಾರದ ಮೇಲೆ ಹೇಳುವುದಾದರೆ ಇದು ಸಾಧ್ಯವಿಲ್ಲ ಎನ್ನುವುದಕ್ಕಿಂತ ಶತಸಿದ್ಧ ಇದು ಸಾಧ್ಯವೇ ಇಲ್ಲ ಎಂದು ತಿಳಿದುಬಿಡಿ. ಒಂದು ವೇಳೆ ಇದು ಸಾಧ್ಯವಾಗಿದ್ದರೆ ದೇಶದಲ್ಲಿ ಅಲ್ಲಲ್ಲಲ್ಲಾ ಇಡೀ ಪ್ರಪಂಚದಲ್ಲಿ ಅವರವರ ಇಚ್ಚೆಯಂತೆ ಅವರವರ ಅನುಕೂಲಕ್ಕೆ ತಕ್ಕಂತೆ ಯೋಗ್ಯತೆಯ ಅನುಗುಣವಾಗಿ ಎಲ್ಲರೂ ಡಾಕ್ಟರ್, ಎಂಜಿನೀಯರ್, ಪೊಲಿಟಿಸಿಯನ್ ಆಗಿಬಿಡುತ್ತಿದ್ದರೇನೊ, ಯಾರಿಗೆ ಗೊತ್ತು ದೇವರೆ ಬಲ್ಲ, ಇನ್ನು ಕೆಲವರು ನೇರವಾಗಿ ದೇವರೆ ಆಗಿಬಿಡಿತ್ತಿದ್ದರೇನೋ! ಅಲ್ವೆ ಮತ್ತೆ.

ನಾವು ಅಂದುಕೊಂಡಂತೆ ನಮ್ಮ ಮಕ್ಕಳನ್ನು ನಾವೇ ಬೆಳಸುವುದಾದರೆ ಅವರು ಸಹ ನಾವಂದುಕೊಂಡಂತೆ ಆಗಿ ಬಿಡುತ್ತಾರೆ ಎನ್ನುವುದಾದರೆ ಇಷ್ಟೆಲ್ಲ ಮಾಡುವ ಅವಶ್ಯಕತೆಯಾದರು ಯಾಕೆ ಬೇಕಿತ್ತು ಹೇಳಿ ಪಾಲಕರಾದ ನಾವು ಇದನ್ನು ಇನ್ನೂ ಸ್ವಲ್ಪ ಜವಾಬ್ದಾರಿಯಿಂದ ಅರ್ಥೈಸಿಕೊಳ್ಳಲು ಪ್ರಯತ್ನ ಮಾಡುವುದಾದರೆ ನಾವು ಇತ್ತೀಚಿನ ಕೆಲವು ಸಂಘ ಸಂಸ್ಥೆಗಳ ಆಡಳಿತ ಮಂಡಳಿಗಳ ಪ್ರಚಾರದ ಪರಾಕಾಷ್ಠೆಯನ್ನು ಗಮನಿಸಿದಾಗ ಅವನು ಹೇಳಿದ್ದನ್ನೆ ಇವರು ಇನ್ನೂ ಸ್ವಲ್ಪ ಹೆಚ್ಚಾಗಿಯೆ ಅರ್ಥೈಸಿಕೊಂಡಿದ್ದಾರೆ ಅನ್ನಿಸಿದ್ದು ಸುಳ್ಳಲ್ಲ.

**ಉದಾ:–**

ಅ. ನಿಮ್ಮ ಮಗು ನೂರಕ್ಕೆ ನೂರು ಅಂಕ ಪಡೆಯಬೇಕೆ ನಮ್ಮ ಶಾಲೆಯಲ್ಲಿ ನೊಂದಣಿ ಮಾಡಿ!

**ಉದಾ:–**

ಬ. ನಿಮ್ಮ ಮಗುವಿಗೆ ಕಂಪ್ಯೂಟರ ಡೀ ಕೊಡಿಂಗನಲ್ಲಿ ನೂರಕ್ಕೆ ನೂರು ಪ್ರತಿಶತ ಅಂಕ ಬೇಕೆ ನಮ್ಮಲ್ಲಿ ಅಡ್ಮಿಷನ ಮಾಡಿಸಿ!

**ಉದಾ:–**

ಕ. ವಿದೇಶದಲ್ಲಿ ನಿಮ್ಮ ಮಗುವಿನ ಕರಿಯಾರ್ ಖಾತ್ರಿಪಡಿಸಿಕೊಳ್ಳಲು ಇಂದೇ ನಮ್ಮ ಸಂಸ್ಥೆಯಲ್ಲಿ ಅಡ್ಮಿಷನ್ ಮಾಡಿಸಿ!

ಇಂತಹ ಅತಿರೇಕದ ಪ್ರಚಾರವನ್ನು ಗಮನಿಸಿದಾಗ ಅವರು ಹೇಳುತ್ತಿರುವುದು ಅತೀ ಎನಿಸದಿರದು ಅಲ್ಲವೇ?

**ವಿಚಾರ–2**

ಇನ್ನೊಂದು ರೀತಿಯಲ್ಲಿ ನೋಡುವುದಾದರೆ

ಒಂದು ಮಗುವಿಗೆ ನಾವು ಏನನ್ನು ಕಲಿಸಲು ಸಾಧ್ಯವಿಲ್ಲ ಎನ್ನುವುದಾದರೆ, ನಾವೆಲ್ಲ ನಮ್ಮ ತಂದೆ ತಾಯಿಯರಿಂದ ನಮ್ಮ ಶಿಕ್ಷಕರಿಂದ ಏನನ್ನೂ ಕಲಿತು ಬಂದಿಲ್ಲವೆ? ಈಗ ನಮಗೆ ತಿಳಿದ ಇದೆಲ್ಲ ನಮಗೆ ಯಾರು ಕಲಿಸದೇ ಬಂದೀತೆ, ಅಥವಾ ಮಗುವು ಹುಟ್ಟುವಾಗಲೇ ಎಲ್ಲ ಕಲಿತು ಬರಲು ಸಾಧ್ಯವೆ? ಎಲ್ಲಾ ಹುಟ್ಟುವ ಮೊದಲೆ ಕಲಿತು ಬಂದಿರುತ್ತದೆಯೇ? ಎಂದು ಕೇಳಬಹುದು ಅಲ್ಲವೆ, ಸರಿಯಾಗಿದೆ ನಿಮ್ಮ ಪ್ರಶ್ನೆ ಇಲ್ಲಿ ನಾವು ಕೇವಲ ಕಲಿಕೆಯ ಒಂದು ಮೊಗ್ಗಲನ್ನು ಮಾತ್ರ ಅಂದರೆ ಉದ್ದೇಶಿತ ಕಲಿಕೆ/ವ್ಯವಸ್ಥಿತ(ಶಾಲೆ, ತರಬೇತಿ, ಶಿಕ್ಷೆ) ಕಲಿಕೆಯ ಬಗ್ಗೆ ಮಾತ್ರ ಗಮನ ಹರಿಸುತಿದ್ದೇವೆ ಹೊರತು ಮಗುವಿನ ಪರಿಸರಾತ್ಮಕ/ಸ್ವ ಅನುಭವದ (ವೀಕ್ಷಣೆ, ಅನುಕರಣೆ, ಪ್ರೇರಣೆ, ಪ್ರೊತ್ಸಾಹದ) ಕಲಿಕೆಯ ಬಗ್ಗೆ ನಮ್ಮ ಪಾಲಕರು ಪ್ರಸ್ತುತ ಸಮಯದಲ್ಲಿ ಅಂದರೆ ಇವತ್ತಿನ ಈ ಜಮಾನದಲ್ಲಿ ನಿರ್ಲಕ್ಷ ಮಾಡುತಿದ್ದಾರೆ ಎನ್ನಿಸುವುದಿಲ್ಲವೆ?

ಒಮ್ಮೆ ಪಾಲಕರಾದ ನಾವುವೆಲ್ಲ ಏಕೆ ನಮ್ಮನ್ನು ನಾವೆ ಕೇಳಿಕೊಳ್ಳಬಾರದು? ಹಾಗಾದರೆ ಇದು ಸಹ ಮಗುವಿನ ಕಲಿಕೆಯಲ್ಲವೆ? ಈ ರೀತಿಯಲ್ಲಿಯೂ ಕಲಿಕೆಯನ್ನು ಮಗು ತನ್ನ ಪರಿಸರಾತ್ಮಕವಾಗಿ ತಾನಾಗಿ ತನ್ನಷ್ಟಕ್ಕೆ ತಾನೆ ಕಲಿಯುತ್ತದೆ ಎಂದಾದರೆ, ನಿಮ್ಮ ಅಂದರೆ ಪಾಲಕರ/ಶಿಕ್ಷಕರ ಅವಶ್ಯಕತೆ ಇದೆಯೇ? ಇದೇ ಎಂದಾದರೆ ಏತಕ್ಕಾಗಿ, ಏನನ್ನು ಕಲಿಸಲು ಸ್ಪಷ್ಟ ಪಡಿಸಿಕೊಳ್ಳಬೇಕಲ್ಲವೆ?

ಸರಿ ಹಾಗಾದರೆ ಮಕ್ಕಳು ಹೀಗೆ ಕಲಿತ ಜ್ಞಾನ ಯಾರಿಗಾಗಿ? ಅಂದರೆ ಮಗುವಿಗಾಗಿಯೇ (ವೈಯಕ್ತಿಕ ಉಪಯೋಗಕ್ಕಾಗಿಯೇ) ಅಥವಾ ಪಾಲಕರ/ಶಿಕ್ಷಕರ ಅವಶ್ಯಕತೆಗಾಗಿಯೆ? ಇಲ್ಲವೆ ಸಮಾಜಕ್ಕಾಗಿಯೆ? ಮಕ್ಕಳು ಕಲಿಯುವುದು ಮಕ್ಕಳಿಗಾಗಿ ಎನ್ನುವುದಾದರೆ ಪಾಲಕರ/ಶಿಕ್ಷಕರ ಮುಖೇನ ಕಲಿಕೆಯ ಅವಶ್ಯಕತೆ ಇದೆಯೆ? ಏಕಂದರೆ ಒಂದು ಮಗು ಅಥವಾ ಮಕ್ಕಳು ತನಗೆ/ತಮಗೆ ಬೇಕಾದ್ದನ್ನು ತಾನೆ/ತಾವೆ ತನ್ನ/ತಮ್ಮ ಸುತ್ತಲಿನಿಂದ ಪರಿಸರಾತ್ಮಕವಾಗಿ ಕಲಿಯುತ್ತದೆ/ಕಲಿಯುತ್ತವೆ ಎನ್ನುವುದಾದರೆ ಇವರ ಅವಶ್ಯಕತೆ....? ಇಲ್ಲಿಲ್ಲ ಮಗು ಕಲಿಯುವುದು ಪಾಲಕರಿಗಾಗಿ/ಶಿಕ್ಷಕರಿಗಾಗಿ ಸಮಾಜಕ್ಕಾಗಿ ಎನ್ನುವುದಾದರೆ, ಆ ಮಗು ಏನನ್ನು ಕಲಿಯಬೇಕಾಗಿದೆ, ಎಷ್ಟನ್ನು ಕಲಿಯಬೇಕಾಗಿದೆ ಮತ್ತು ಅದರ ಅವಶ್ಯಕತೆ ಮಗುವಿಗೆ ಎಷ್ಟು ಮತ್ತು ಪಾಲಕರಿಗೆ/ಸಮಾಜಕ್ಕೆ ಎಷ್ಟು? ಪಾಲಕರಿಗೆ ಯಾವ ರೀತಿಯ ಕಲಿಕೆ ಹಾಗೆಯೆ ಸಮಾಜಕ್ಕೆ ಎಂತಹದ್ದು ಎನ್ನುವುದನ್ನು ನಾವು ಸ್ಪಷ್ಟ ಪಡಿಸಿಕೊಳ್ಳಬೇಕಲ್ಲವೆ. ಆಗ ನಮಗೆ ಗೊತ್ತಾಗುತ್ತದೆ ನಾವು ಮಗುವಿಗೆ ಏನನ್ನು ಕಲಿಸಿತಿದ್ದೇವೆ ಮತ್ತು ಏನನ್ನು ಕಲಿಸಬೇಕಾಗಿತ್ತು ಹಾಗೆಯೆ ಯಾರಿಗಾಗಿ ಕಲಿಸಿತಿದ್ದೇವೆ ಮತ್ತು ಕಲಿಸಬೇಕಾಗಿತ್ತು ಎಂದು.



**ಜಿ. ಶಿವಕುಮಾರ್ ಸೋಗಿ,**
**ಕಾರವಾರ, ಕೈಗಾ.**

ಸರಿ ಹಾಗಾದರೆ ಮೇಲಿನ ಈ ಎರಡು ಅಂಶಗಳ ಕಲಿಕೆಯಿಂದ ಪಾಲಕರಾದ ನಾವು ನಮ್ಮಲ್ಲಿ ಇನ್ನೂ ಕೆಲವು ಅಂಶಗಳನ್ನು ಸ್ಪಷ್ಟ ಪಡಿಸಿಕೊಳ್ಳಬೇಕು ಅವುಗಳೆಂದರೆ.

1–ಕಲಿಕೆ ಎಂದರೆ ಏನು ಮತ್ತು ಏನನ್ನು ಕಲಿಯಬೇಕು?

2–ಮಗು ಯಾರಿಗಾಗಿ ಮತ್ತು ಏತಕ್ಕಾಗಿ ಕಲಿಯಬೇಕು?

3–ನಿಮ್ಮ ಮಗುವಿನ ಕಲಿಕೆ ಕೇವಲ ಉದ್ದೇಶಿತ ಕಲಿಕೆಗೆ ಸೀಮಿತವೆ? ಪರಿಸರಾತ್ಮಕವಾಗಿಯೂ ಕಲಿಯುತ್ತಿದೆಯೋ ಅಂತಹ ವಾತಾವರಣ ನಿಮ್ಮ ಮಗುವಿಗೆ ಕಲ್ಪಿಸಲಾಗಿದೆಯೇ?

4–ನಿಮ್ಮ ಮಗು ಇಷ್ಟ ಪಟ್ಟು ಕಲಿಯುತ್ತದೆಯೋ ಅಥವಾ ಕಷ್ಟ ಪಟ್ಟೋ?

5–ನಿಮ್ಮ ಮಗುವಿಗೆ ಅದರ ಆಸಕ್ತಿಯ ಹೊರತು ನೀವೇನಾದರು ಕಲಿಸಲು ಸಾಧ್ಯವಾಗಿದೆಯೇ?

ಈ ಮೇಲಿನ ಅಂಶಗಳನ್ನು ಯಾವ ಪಾಲಕರು ಸ್ಪಷ್ಟವಾಗಿ ತಿಳಿದುಕೊಂಡಿರುತ್ತಾರೆ ಅವರೇ ನಿಜವಾದ ಜವಾಬ್ದಾರಿಯುತ ಪಾಲಕರು ಎನ್ನಬಹುದು.

ಹಾಗಾದರೆ ಜವಾಬ್ದಾರಿಯುತ ಪಾಲಕರಾದ ನಾವು ನೀವೆಲ್ಲ ಈಗ ಹೇಳಬೇಕಾಗಿದೆ, ನಮಗೆ/ನಿಮಗೆ ನಮ್ಮ/ನಿಮ್ಮ ಮಗುವಿಗೆ ಅದರ ಆಸಕ್ತಿಯ ಹೊರತು ಪಡಿಸಿ ಏನನ್ನಾದರು ಕಲಿಸಲು ಸಾಧ್ಯವಾಗಿದೆಯೇ? ಸಾಧ್ಯವಾಗಿದೆ ಎನ್ನುವುದಾದರೆ ಅದರ ಪರಿಣಾಮವೇನು? ಒಂದು ವೇಳೆ ಧನಾತ್ಮಕವಾಗಿ ಫಲಿತಾಂಶವಿದ್ದರೆ ಚನ್ನ, ಇದರ ಹೊರತಾಗಿ ನಮ್ಮ/ನಿಮ್ಮ ಆಸಕ್ತಿಯ ಬೆನ್ನುಹತ್ತಿದ ಆ ಮಗುವಿನ ಜೀವನಲ್ಲಿ ಏನಾದರು ಏರುಪೇರಾದರೆ? ಆ ಮಗು ತನ್ನ ಜೀವನವನ್ನು ತಾನಂದುಕೊಂಡಂತೆ ಜೀವಿಸಲಾಗದಿದ್ದರೆ? ಅದು ಪಾಲಕರಾಗಿ ನಮ್ಮ/ನಿಮ್ಮ ದೊಡ್ಡ ಸೋಲು! ಅಲ್ಲಿ ನೀವು ನಿಮ್ಮ ಆಸಕ್ತಿಯನ್ನು ನಿಮ್ಮ ಸೋಲುಗಳನ್ನು ನಿಮ್ಮ ಸವಾಲುಗಳನ್ನು, ನಿಮ್ಮ ಇಚ್ಚೆಯನ್ನು ನಿಮ್ಮ ಅನುಕೂಲಕ್ಕೆತಕ್ಕಂತೆ ನಿಮ್ಮ ಮಗುವಿನ ಮೂಲಕ ಈಡೇರಿಸಿಕೊಂಡಿದ್ದೀರಿ ಅಂತಾಯಿತಲ್ಲವೆ? ಹಾಗಂತ ಏನೂ ಅರಿಯದ ಮಗುವನ್ನು/ಮಕ್ಕಳನ್ನು ಅವರಿಷ್ಟದಂತೆ ಬಿಟ್ಟುಬಿಡುವುದೂ ಅಲ್ಲ, ಇಲ್ಲಿ ಮಗುವೇ ಕೇಂದ್ರ ಬಿಂದು ಅದರ ಶಕ್ತಿ ಸಾಮರ್ಥ್ಯ ಆ ಮಗುವಿನಲ್ಲಿನ ಆಸೆ ಆಸಕ್ತಿ ಇವುಗಳನ್ನು ಮೊದಲು ಅರಿತುಕೊಳ್ಳಬೇಕು ಅಲ್ಲವೆ?

ಹಾಗಾಗಿ ಹೇಳಿದ್ದು "ಮಗುವಿಗೆ ಏನನ್ನೂ ಕಲಿಸಲು ಸಾಧ್ಯವಿಲ್ಲ!" ಎಂದು, ಹೊರತು ಪಾಲಕರು ಮಕ್ಕಳಿಗೆ ಕಲಿಸುವ ಜವಾಬ್ದಾರಿಯಿಂದ ನುಣಚಿಕೊಳ್ಳುವುದೂ ಅಲ್ಲ. ಅವರ ಅವಶ್ಯಕತೆ ಬೇಡವೆಂದಲ್ಲ, ಇಲ್ಲಿ ಮಗುವಿನ ಆಸಕ್ತಿ ಅಭಿರುಚಿ, ಆಯ್ಕೆ ಮಹತ್ತರವಾಗಿರುತ್ತವೆ ಎನ್ನುವುದಷ್ಟೆ ಕಾಳಜಿ. ಏಕೆಂದರೆ "ಒಂದು ಮೂರ್ತಿ ಹಾಳಯಿತೆಂದು ಇನ್ನೊಂದು ಕಲ್ಲು ಆಯ್ಕೆ ಮಾಡಿಕೊಂಡು ಕೆತ್ತಲು ಇವರು ಕಲ್ಲುಗಳಲ್ಲ!".

# ಬಿಡುಗಡೆಯ ಭಾಗ್ಯ (ಕಥೆ)

ಮೊದಲ ಬಾರಿಗೆ ದೂರದ ದೆಹಲಿಯಲ್ಲಿರುವ ಮಗಳ ಬಳಿ ಹೋಗಲು ತನ್ನನ್ನು ರೈಲಿಗೆ ಬಿಡಲು ಬಂದ ಪತಿಯನ್ನು ಮತ್ತೊಮ್ಮೆ ಕಣ್ತುಂಬ ನೋಡಿದ ಆಕೆ ಆತನಿಗೆ ತನ್ನ ಕಾಳಜಿ ಮಾಡಿಕೊಳ್ಳಲು ಹೇಳುತ್ತಾ ತನ್ನ ಲಗೇಜ್ ನ್ನು ಕೈಗೆ ತೆಗೆದುಕೊಂಡು ಹಿಂತಿರುಗಿ ನೋಡದೆ ತನ್ನ ಸೀಟಿಗೆ ಹೋಗಿ ಕುಳಿತುಕೊಂಡಳು. ಇನ್ನೇನು ಈತ ಕೈ ಬೀಸಬೇಕೆಂಬ ಹೊತ್ತಿಗೆ ರೈಲು ಹೊರಟೆಹೋಯಿತು. ಸಣ್ಣದಾಗಿ ಸಿಳ್ಳೆ ಹಾಕುತ್ತಾ ಸ್ಟೇಷನ್ ನಿಂದ ಹೊರಬಿದ್ದ ಆತ ಹೆಂಡತಿ ಮನೆಯಲ್ಲಿಲ್ಲದ ಈ ಹೊತ್ತಿನಲ್ಲಿ ಏನೆಲ್ಲಾ ಮಜಾ ಮಾಡಬಹುದು ಎಂಬುದನ್ನು ಯೋಜಿಸತೊಡಗಿದ.

ಪಾರ್ಕಿಂಗ್ ನಲ್ಲಿದ್ದ ಕಾರಿನ ಬಳಿ ಬಂದು ಕಾರಿನ ಡ್ರೈವಿಂಗ್ ಸೀಟಲ್ಲಿ ಕುಳಿತು ಗಾಡಿ ಶುರು ಮಾಡಿ ಮುಂದಕ್ಕೆ ಓಡಿಸಿದಾಗ ಥಟ್ಟನೆ ಆತನ ತಲೆಗೆ ಬಂದದ್ದು ಗಾಡಿಯನ್ನು ಏರುವಾಗ ತನ್ನ ಪತ್ನಿ ಕುಸುಮ ತನ್ನ ಎದೆಯ ಮೇಲೆ ಕೈ ಆಡಿಸಿ ಆರೋಗ್ಯದ ಕಾಳಜಿ ಮಾಡಿಕೊಳ್ಳಲು ಹೇಳಿದ್ದು. ಏಕೋ ಗೊತ್ತಿಲ್ಲ... ಆತನ ಅರಿವಿಗೆ ಬಾರದೆ ಆತನ ಕೈ ಆತನ ಎದೆಯ ಭಾಗವನ್ನು ಸವರಿತ್ತು. ಆತನ ಅಂಗಿಯ ಜೇಬಿನಲ್ಲಿ ಏನೋ ತಾಕಿದಂತಾಗಿ ಕೈ ಹಾಕಿ ನೋಡಿದರೆ ಪುಟ್ಟದೊಂದು ಕಾಗದ ಜೇಬಿನಲ್ಲಿ ಬೆಚ್ಚಗೆ ಕುಳಿತಿತ್ತು.

ಕಾರನ್ನು ಒಂದೆಡೆ ಸೈಡಿಗೆ ನಿಲ್ಲಿಸಿ ಲಗುಬಗೆಯಿಂದ ಕಾಗದವನ್ನು ತೆರೆದು ನೋಡಿದನಾತ.. ಪತ್ರದಲ್ಲಿನ ಕೈಬರಹ ಆತನ ಪತ್ನಿಯದ್ದೆ.... ಅರೆ ಇಷ್ಟೊತ್ತು ನನ್ನ ಜೊತೆ ಇದ್ದವಳು, ಅದೇಕೆ ಪತ್ರ ಬರೆದಳು ಎಂಬ ಕುತೂಹಲ ಆತನಿಗೆ ಪತ್ರವನ್ನು ಓದುವಂತೆ ಮಾಡಿತು.

ಪತ್ರದ ಒಕ್ಕಣೆ ಹೀಗಿತ್ತು

## ನನ್ನ ಪ್ರೀತಿಯ!? ಯಜಮಾನರೇ



ಮೇಲಿನ ಒಕ್ಕಣೆ ನಿಮಗೆ ಆಶ್ಚರ್ಯ ತರಿಸಿರಬಹುದು. ಯಾವತ್ತಾದರೂ ಪ್ರೀತಿಯಿಂದ ನಡೆದುಕೊಂಡಿದ್ದರೆ ತಾನೆ ಈ ಒಕ್ಕಣೆಗೊಂದು ಅರ್ಥ ಬರುವುದು. ಇನ್ನು ಯಜಮಾನರೇ ಎಂದು ಕರೆಯಲು ಕಾರಣ ನಾನ್ಯಾವತ್ತು ನಿಮ್ಮ ಬಾಳಸಂಗಾತಿ ಆಗಿರಲೇ ಇಲ್ಲ. ಸದಾ ನಿಮ್ಮ ಬೇಕು ಬೇಡಗಳನ್ನು ಪೂರೈಸುತ್ತಾ ನಿಮ್ಮ ಊಟ ಉಪಚಾರಗಳ ವ್ಯವಸ್ಥೆ ಮಾಡುತ್ತಾ, ನಿಮ್ಮ ಮನೆಯ (ಹೌದು ನಿಮ್ಮ ಮನೆಯೇ! ಏಕೆಂದರೆ ಮಾತಿಗೊಮ್ಮೆ ನನ್ನ ಮನೆಯಲ್ಲಿ ನನ್ನ ಮಾತೇ ನಡೆಯಬೇಕು ಎಂದು ಹೇಳಿ ಅಂತೆಯೇ ನಡೆಯುತ್ತಿಕೊಳ್ಳುತ್ತಿದ್ದೀರಲ್ಲವೇ) ತೊತ್ತಿನಂತೆ ವರ್ಷಗಳ ಕಾಲ ಜೀವನ ನಡೆಸಿದ್ದೇನೆ. ಅತ್ತೆ, ಮಾವ, ನೀವು ಮತ್ತು ಮಕ್ಕಳು ಹೀಗೆ ಎಲ್ಲರಿಗೂ ಬೇಕಾದದ್ದನ್ನ ಒದಗಿಸುವ ಯಂತ್ರವಾಗಿದ್ದೆ. ಯಾವತ್ತೂ ನನ್ನ ಮಕ್ಕಳು ಕೂಡ ನನಗೆ ನೀಡಬೇಕಾದ ಆದರವನ್ನು, ಪ್ರೀತಿಯನ್ನು ನೀಡಲೇ ಇಲ್ಲ ...ಕಾರಣ ನೀವೇ. ನನ್ನೆಡೆಗೆ ನೀವು ತೋರುವ ಅಸಡ್ಡೆ, ಅನಾದರಗಳನ್ನು ಕಂಡು ಬೆಳೆದ ಮಕ್ಕಳು ಕೂಡ ನನ್ನೊಂದಿಗೆ ಹಾಗೆಯೇ ನಡೆದುಕೊಂಡರು. ತಾಯಿ ಎಂದರೆ ಅವರ ಪಾಲಿಗೆ ಅವರಿಗೆ ಬೇಕಾಗುವ ಎಲ್ಲವನ್ನು ಪೂರೈಸುವ ಭಾವನೆಗಳಿಲ್ಲದ ಒಂದು ಯಂತ್ರ ಎಂದು.

ಇದರಲ್ಲಿ ನನ್ನ ತಪ್ಪು ಕೂಡ ಇದೆ.... ಒಳ್ಳೆಯ ಸೊಸೆಯಾಗುವ, ಒಳ್ಳೆಯ ಪತ್ನಿಯಾಗುವ, ಒಳ್ಳೆಯ ತಾಯಿಯಾಗುವ, ಉತ್ತಮ ಗೃಹಿಣಿಯಾಗುವ ಭರದಲ್ಲಿ ನನ್ನನ್ನು ನಾನು ಮರೆತೇ ಬಿಟ್ಟೆ. ನನಗೂ ಒಂದು ವ್ಯಕ್ತಿತ್ವವಿದೆ, ಆ ವ್ಯಕ್ತಿತ್ವಕ್ಕೊಂದು ಘನತೆ ಇದೆ ಎಂಬುದು ನನ್ನ ಅರಿವಿಗೆ ಬಾರದೆ ಹೋಯಿತು. ನನ್ನರಿವಿಗೆ ಬರುವ ಹೊತ್ತಿಗೆ ಕಾಲ ಮಿಂಚಿಹೋಗಿತ್ತು. ಅತ್ತೆ ಮಾವ ಕಾಲನ ತೆಕ್ಕೆಗೆ ಸೇರಿ ಹೋಗಿದ್ದಾರೆ. ಮಕ್ಕಳು ಸ್ವತಂತ್ರವಾಗಿ ಬದುಕು ಕಟ್ಟಿಕೊಳ್ಳುತ್ತಿದ್ದಾರೆ, ಅವರಿಗೆ ನನ್ನ ಅವಶ್ಯಕತೆ ಇಲ್ಲ. ನಿಮಗೆ ನಿಮ್ಮೆಲ್ಲ ಕೆಲಸಗಳನ್ನು ಪೂರೈಸಲು ಮಾತ್ರ ನಾನು ಬೇಕಾಗಿರಬಹುದು... ಆದರೆ ಪತ್ನಿಯಾಗಿ ಎಂದೂ ಅಲ್ಲ ಎಂಬುದು ನನಗೆ ಗೊತ್ತು. ತಡವಾಗಿಯಾದರೂ ನನ್ನರಿವಿಗೆ ಬಂದದ್ದು ಇಷ್ಟು. ದೇವರು ನನಗೆ ಕೊಟ್ಟಿರುವುದು ಒಂದೇ ಜನ್ಮ ಈ ಒಂದು ಜನ್ಮದಲ್ಲಿಯೇ ನಾನು ನಿಮ್ಮೆಲ್ಲರ ಜೊತೆ ಬದುಕುತ್ತಲೇ ನನ್ನದೇ ಆದ ವೈಯಕ್ತಿಕ ಆಸೆ ಆಕಾಂಕ್ಷೆಗಳನ್ನು ಪೂರೈಸಿಕೊಂಡು ಉತ್ತಮ ಬದುಕನ್ನು ಕಟ್ಟಿಕೊಳ್ಳಬೇಕಾಗಿತ್ತು ಎಂದು. ಈಗಲೂ ಕಾಲ ಮಿಂಚಿಲ್ಲ..ಅಂತಯೇ ನಿಮ್ಮೆಲ್ಲರಿಂದ ದೂರವಾಗಿ..... ನನ್ನ ಸ್ನೇಹಿತೆಯ ಸಹಾಯದಿಂದ ನಾನು ದೂರದ ಊರೊಂದರ ಶಾಲೆಯಲ್ಲಿ ಶಿಕ್ಷಕಿಯಾಗಿ ಸೇವೆ ಸಲ್ಲಿಸಲು ಹೊರಟಿದ್ದೇನೆ. ಈ ಪತ್ರವನ್ನು ನೀವು ಓದುವ ವೇಳೆಗೆ ನಾನು ನನ್ನ ಪಯಣದ ಹಾದಿಯನ್ನು ಬದಲಿಸಿರುತ್ತೇನೆ. ನನ್ನನ್ನು ಹುಡುಕುವ ಪ್ರಯತ್ನ ಮಾಡಲೇಬೇಡಿ. ಮುಂದಿನ ಒಂದು ಜನ್ಮವಿದ್ದರೆ ಹೆಣ್ಣಿನ ನೋವು ಸಂಕಟಗಳನ್ನು ಅರಿತು ಬಾಳಿ ಎಂದಷ್ಟೇ ಹೇಳಬಯಸುವೆ.

ಇಂತಿ ನಿಮ್ಮವಳಾಗಿದ್ದ
?????

**– ವೀಣಾ ಹೇಮಂತ್ ಗೌಡ ಪಾಟೀಲ್**
ಮುಂಡರಗಿ ಗದಗ್

## ಕವಿ ಮನಸು

### ಮಾನವ

ನಿನ್ನನ್ನು ನೀನು ಮೊದಲು ಪ್ರೀತಿಸು
ಓ! ದುಷ್ಟ ಮಾನವ
ಗಳಿಸು ಪ್ರೀತಿ ವಿಶ್ವಾಸ ನೆರೆ ಹೊರೆಯವರ
ಬಿಟ್ಟು ನೀ ಕುಲಾಂತರವ
ಹಲವು ಧರ್ಮ ಹಲವು ಜಾತಿಗಳ
ಬಿಟ್ಟು ನೀ ದ್ವೇಷ ಭಾವವ
ಹಲವು ವರ್ಣ ಮೇಲು ಕೀಳುಗಳ
ತೊರೆದು ನೀ ವ್ಯತ್ಯಾಸವ
ರಾಮ ರಹೀಮ ಹಲವು ದೇವರ
ಸ್ಮರಣೆ ಒಂದೆ ಪೂಜ್ಯಭಾವ
ಹಲವು ಬಣ್ಣ ವೇಷ ಭೂಷಣಗಳ
ಒಂದೇ ಭಾವ ಮಾನ ಮುಚ್ಚುವ
ಹಿಂದು ಮುಸ್ಲಿಮ್ ಜೈನ ಬೌದ್ಧ ರ
ಜನರಲ್ಲಿಹ ಒಂದೇ ರಕ್ತ ಕೆಂಪು
ಸರ್ವೋತ್ತಮರಲ್ಲಿರಲಿ ಏಕತಾ ಭಾವ
ಅದುವೆ ವಿಶ್ವಮಾನವ

– ಶ್ರೀ ಜಗದೀಶ ಬೆನ್ನೂರ
ಹೊಸಪೇಟೆ

### ಅಂತೆಗಳ ಕಂತೆ...

ಒಳಿತು ಮಾಡುವ ಮನಸಂತೆ
ಆದರೂ ಸುಮ್ಮನಿರುವರಂತೆ..
ಸಹಾಯ ಮಾಡಬಯಸುವರಂತೆ
ಕೈ ಎತ್ತಿ ಏನೂ ಕೊಡಲೊಲ್ಲರಂತೆ..

ಜೊತೆ ನಿಲ್ಲುವ ಮನಸಂತೆ
ಜಗಕಂಜಿ ದೂರ ಸರಿಯುವರಂತೆ
ನೂರಾರು ದಾರಿ ತೋರುವರಂತೆ
ದಾರಿ ತಪ್ಪಿರಲು ಯಾರು ಬಾರರಂತೆ..

ತಪ್ಪುಗಳ ಪಟ್ಟಿ ಮಾಡುವರಂತೆ
ಸರಿಗಳ ಸದ್ದೂ ಎತ್ತರಂತೆ
ನಿನ್ನ ಏಳಿಗೆ ಬಯಸುವರಂತೆ
ಎದ್ದಾಗ ಕಾಲೆಳೆಯುವರಂತೆ..

ಅವರು ಹೇಳಿದ್ದೇ ಸರಿಯಂತೆ
ಎದುರಾಡಿದರೆ ಕೆಟ್ಟವರಂತೆ
ಕಷ್ಟಕ್ಕೆ ಕರೆಯುವರಂತೆ
ಖುಷಿಯಲ್ಲಿ ಮರೆಯುವರಂತೆ

ಸಲುಗೆಯಲಿ ಬೆರೆಯುವರಂತೆ
ಸದ್ದಿಲ್ಲದೆ ಸುಲಿಗೆ ಮಾಡುವರಂತೆ
ಬುದ್ಧಿವಾದ ಹೇಳಬಯಸುವರಂತೆ
ಒತ್ತಾಯವ್ಯಾಕೆಂದು ಸುಮ್ಮನಾಗುವರಂತೆ..

ಎದುರಿಗೆ ನಸುನಕ್ಕು ನಟಿಸುವರಂತೆ
ಹಿಂದೆ ನಿಂತು ಅಣುಕಿಸಿ ನಗುವರಂತೆ
ಇಲ್ಲಿ ಎಲ್ಲರೂ ನಮ್ಮವರಂತೆ
ಆದರೆ ಯಾರೂ ನಮ್ಮವರಲ್ಲವಂತೆ...

– ಕವಿತಾ ಜಿ

### ತುಂಗಭದ್ರಾ ನೀರಿನ ಮಟ್ಟ



ಶನಿವಾರ : 02-12-2023

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1592.70 ಅಡಿ |
| ಒಳ ಹರಿವು | 768 ಕ್ಯುಸೆಕ್ |
| ಹೊರ ಹರಿವು | 3322 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 13.434 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1629.31 ಅಡಿ |
| ಒಳ ಹರಿವು | 1003 ಕ್ಯುಸೆಕ್ |
| ಹೊರ ಹರಿವು | 5503 ಕ್ಯುಸೆಕ್ |
| ಸಾಮರ್ಥ್ಯ | 91.496 ಟಿಎಂಸಿ |

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಸಮಾಜ ಸುಧಾರಣೆಗೆ ಕನಕದಾಸರ ಕೀರ್ತನೆಗಳ ಸಾರ ಅಳವಡಿಸಿಕೊಳ್ಳಿ

**ಕನ್ನಡ ವಿಶ್ವವಿದ್ಯಾಲಯದ ಪ್ರೋ.ಚಲುವರಾಜು ಹೇಳಿಕೆ | ಕನಕದಾಸರ ಜಯಂತಿ ಆಚರಣೆ**



■ **ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**

ಕನಕದಾಸರು ಕೀರ್ತನೆಗಳ ಮೂಲಕ ಸಮಾಜದಲ್ಲಿ ಜಾಗೃತಿ ಮೂಡಿಸಿದರು, ಅವರನ್ನು ಒಂದು ಜಾತಿಗೆ ಸೀಮಿತಮಾಡಬೇಡಿ ಎಂದು ಹಂಪಿ ವಿಶ್ವವಿದ್ಯಾಲಯದ ಪ್ರೋ.ಚಲುವರಾಜು ಅಭಿಪ್ರಾಯ ವ್ಯಕ್ತಪಡಿಸಿದರು.

ಪಟ್ಟಣದ ಆಡಳಿತ ಸೌಧದಲ್ಲಿ ತಾಲೂಕು ಆಡಳಿತದಿಂದ ಸರಳವಾಗಿ ಹಮ್ಮಿಕೊಂಡಿದ್ದ ಭಕ್ತ ಶ್ರೇಷ್ಠ ಕನಕದಾಸರ 536ನೇ ಜಯಂತೋತ್ಸವದಲ್ಲಿ ಉಪನ್ಯಾಸಕ ನೀಡಿದರು. ಸಮಾಜದಲ್ಲಿ ಅಂಟುರೋಗವಾಗಿದ್ದ ಮೂಢ ನಂಬಿಕೆ, ಜಾತಿ, ಮೌಢ್ಯ, ಕಂದಾಚಾರಗಳ ವಿರುದ್ಧ ಕೀರ್ತನೆಗಳನ್ನು ಬರೆಯುತ್ತ ಜನರನ್ನು ಎಚ್ಚರಿಸುತ್ತ, ಸಾಮಾನ್ಯರ ಧ್ವನಿಯಾಗಿದ್ದರು. ಅವರ ತತ್ವ ಸಿದ್ಧಾಂತಗಳನ್ನು ಅಳವಡಿಸಿಕೊಳ್ಳಬೇಕು ಎಂದರು.

ಕುರುಬರ ಸಂಘದ ನಿಕಟಪೂರ್ವ ಅಧ್ಯಕ್ಷ ಬುಡ್ಡಿ ಬಸವರಾಜ್ ಮಾತನಾಡಿ, ಸಮುದಾಯದ ಮಕ್ಕಳಿಗೆ ಸರ್ಕಾರದ ಸೌಲಭ್ಯಗಳನ್ನು ಪಡೆದು, ಉತ್ತಮ ಮತ್ತು ಉನ್ನತ ಶಿಕ್ಷಣವನ್ನು ಕೊಡಿಸಬೇಕು ಎಂದು ತಿಳಿಸಿದರು.

ಕುರುಬರ ಸಂಘದ ಅಧ್ಯಕ್ಷ ಸೊನ್ನದ ಶಿವರಾಜ್ ಮಾತನಾಡಿ, ಸರ್ಕಾರದ ಸೌಲಭ್ಯಗಳು ದೊರೆಯುವಂತೆ ಅನುಕೂಲವಾಗಲು, ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡ ವರ್ಗಕ್ಕೆ ಸೇರ್ಪಡೆಮಾಡ ಬೇಕು ಹಾಗೂ ಜಾತಿ ಗಣತಿ ಬಿಡುಗಡೆಗೊಳಿಸಬೇಕು ಎಂದು ಒತ್ತಾಯಿಸಿದರು.

ತಹಸೀಲ್ದಾರ್ ಚಂದ್ರಶೇಖರ್ ಶಂಬಣ್ಣ ಗಾಳಿಯವರು ಮಾತನಾಡಿ, ಸಮಾಜದಲ್ಲಿರುವ ಅಂಕುಡೊಂಕುಗಳನ್ನು ತಿದ್ದುವಂತ ಕೆಲಸ ಮಾಡಿದವರಲ್ಲಿ ಭಕ್ತ ಕನಕದಾಸರು ಒಬ್ಬರು. ಅವರು ಸಮಾಜಕ್ಕೆ ನೀಡಿದ ಕೊಡುಗೆಗಳನ್ನು ಪ್ರತಿಯೊಬ್ಬರು ನೆನಪಿಟ್ಟುಕೊಳ್ಳುವಂತಹ ವಿಷಯವಾಗಿದೆ. ಆವರ ಆದರ್ಶಗಳನ್ನು ಪಾಲಿಸೋಣ ಎಂದರು.

ಬಳಿಕ ತಾ.ಪಂ.ಇಒ ಪರಮೇಶ್ವರಪ್ಪ ಮಾತನಾಡಿದರು.

ಈ ಸಂದರ್ಭದಲ್ಲಿ ಬಿಇಒ ಮೈಲೇಶ್ ಬೇವೂರ್, ಪಿಎಸ್ಐ ಬಸವರಾಜ್ ಅಡವಿಬಾವಿ, ಡಾ.ಬಿ.ಆರ್. ಅಂಬೇಡ್ಕರ್ ಸಂಘದ ತಾಲೂಕು ಅಧ್ಯಕ್ಷ ಗದ್ದಿಕೆರೆ ದೊಡ್ಡಬಸಪ್ಪ, ಛಲವಾದಿ ಮಹಾಸಭಾ ತಾಲೂಕು ಅಧ್ಯಕ್ಷ ಕಾಹಳೆ ಬಸವರಾಜ್, ರೆಡ್ಡಿ ಸಮಾಜದ ತಾಲೂಕು ಅಧ್ಯಕ್ಷ ಕೇಶವರೆಡ್ಡಿ, ವಿಶ್ವಕರ್ಮ ಸಮಾಜದ ತಾಲೂಕು ಅಧ್ಯಕ್ಷ ಬಿ.ಬಸವರಾಜ್, ತಾ.ಪಂ.ಮಾಜಿ ಸದಸ್ಯ ಪ್ರಭಾಕರ, ಮುಖಂಡರಾದ ಜಳಕಿ ಗುರುಬಸಪ್ಪ, ಬಣಕಾರ್ ಗೋಣೆಪ್ಪ, ಪೋಟೋರಾಮಣ್ಣ, ಕೋಗಳಿ ಹನುಮಂತಪ್ಪ, ನೇತ್ರಾನಂದ, ಹ್ಯಾಳ್ಯಾ ಚನ್ನಬಸಪ್ಪ, ಮಾರುತೆಪ್ಪ, ಆಂಜನೇಯ, ಹುಗ್ಗನವರ ಮಧುಸೂಧನ್, ಪುರುಷೋತ್ತಮ, ಹುಡೇದ್ ಹಲುಗಪ್ಪ, ಸೊನ್ನದ ವೀರಯ್ಯ, ಕಂಬಳಿ ಜಂಬಣ್ಣ, ಬಿ.ಕೆ.ಬಸವರಾಜ್, ಕಾಂತರಾಜ್, ಗ್ರಾ.ಪಂ.ಸದಸ್ಯರಾದ ಡಿ.ಟಿ.ನೀಲಪ್ಪ, ಎನ್.ಕರಿಯಪ್ಪ, ಎಚ್.ಎಸ್.ಪ್ರಕಾಶ್ ಮತ್ತಿತರರು ಪಾಲ್ಗೊಂಡಿದ್ದರು.

## ವಚನ ಅರಿವು

### ಕಾಯಕ ನಿಷ್ಠೆ

**ಗುರುವಾದಡೂ ಕಾಯಕದಿಂದಲೇ ಜೀವನ್ಮುಕ್ತಿ.**
**ಲಿಂಗವಾದಡೂ ಕಾಯಕದಿಂದಲೇ ಶಿಲೆಯ ಕುಲ ಹರಿವುದು.**
**ಜಂಗಮವಾದಡೂ ಕಾಯಕದಿಂದಲೇ ವೇಷದ ಪಾಶ ಹರಿವುದು.**
**ಗುರುವಾದಡೂ ಚರಸೇವೆಯ ಮಾಡಬೇಕು.**
**ಲಿಂಗವಾದಡೂ ಚರಸೇವೆಯ ಮಾಡಬೇಕು.**
**ಜಂಗಮವಾದಡೂ ಚರಸೇವೆಯ ಮಾಡಬೇಕು.**
**ಚೆನ್ನಬಸವಣ್ಣಪ್ರಿಯ ಚಂದೇಶ್ವರಲಿಂಗದ ಅರಿವು.**

**– ನುಲಿಯ ಚಂದಯ್ಯ**

ಈ ವಚನದಲ್ಲಿ 'ಗುರು, ಲಿಂಗ, ಜಂಗಮ'ವಾದರೂ ಕಾಯಕ ಮಾಡಲೇಬೇಕೆಂಬ ನಿಲುವು ಪ್ರಕಟಗೊಂಡಿರುವುದನ್ನು ಕಾಣುತ್ತೇವೆ. ಪ್ರತಿಯೊಬ್ಬ ಮನುಷ್ಯನು ಕೂಡ ಕಾಯಕವನ್ನು ಮಾಡಬೇಕೆಂಬ ನಿಲುವು ವಚನಕಾರರದು. ಪೂಜ್ಯ ಸ್ಥಾನಕ್ಕೇರಿದವನು ಕೂಡ ಕಾಯಕದಿಂದ ಬದುಕು ಸಾಗಿಸಿದಾಗ ಮಾತ್ರ ಜೀವನ್ಮುಕ್ತಿ. ಗುರುವಾದರೂ ಸರಿ, ಜಂಗಮವಾದರೂ ಸರಿ. ಅಷ್ಟೇಕೇ ಸಾಕ್ಷಾತ್ ಶಿವನಾದರೂ ಕಾಯಕದಲ್ಲಿ ತೊಡಗಿಕೊಳ್ಳಬೇಕು ಎಂಬುದು ವಚನಕಾರರು ಕಟ್ಟಿದ ಭದ್ರ ಆರ್ಥಿಕ ಸಿದ್ಧಾಂತ.

ಮಾನವನ ಉದ್ಧಾರಕ್ಕೆ ಆರ್ಥಿಕ ಭದ್ರತೆ, ಸಮಾಜದಲ್ಲಿ ತಾರತಮ್ಯಗಳ ನಿವಾರಣೆಗೆ ವಚನಕಾರರು ಕಂಡುಕೊಂಡ ವಿಶೇಷ ಮಾರ್ಗವೇ ಕಾಯಕ ಸಿದ್ಧಾಂತ. ಇದು ದೇಹ, ಮನಸ್ಸು ತೊಡಗಿ ಮಾಡುವಂತಹದ್ದು. ಕೇವಲ ಬದುಕು ನೂಕುವ ವೃತ್ತಿಯಾಗಿರದೇ ಶ್ರಮ ಗೌರವ, ಸ್ವಾವಲಂಬನೆ, ಸ್ವಾಭಿಮಾನದ ಬದುಕು, ನಿಷ್ಠೆ, ಪ್ರಾಮಾಣಿಕತೆಯ ಜೀವನ, ಸಮಷ್ಟಿ ಪ್ರಜ್ಞೆಯ ಕಾಯಕ ತುಂಬ ಮಹತ್ವವಾದುದು ಎಂಬುದನ್ನು ನುಲಿಯ ಚಂದಯ್ಯನು ಈ ವಚನದಲ್ಲಿ ಸ್ಪಷ್ಟವಾಗಿಯೇ ತಿಳಿಸುತ್ತಾನೆ.

(ಡಾ. ನಂದೀಶ್ವರ ದಂಡೆ ಅವರ ವಚನ ಜೀವನ ಮಾರ್ಗ ಪುಸ್ತಕದಿಂದ)

# ಒಂದು ಕೋಟಿ ಭಗವದ್ಗೀತೆ ಸಮರ್ಪಣೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಉಡುಪಿಯಲ್ಲಿ ಶ್ರೀಕೃಷ್ಣನಿಗೆ ಪೂಜೆ ಸಲ್ಲಿಸುವ ಪುತ್ತಿಗೆ ಶ್ರೀಗಳ ಪರ್ಯಾಯ ಅವಧಿ ಮುಂದಿನ ಜನವರಿ 18ರಿಂದ ಎರಡು ವರ್ಷಗಳ ಕಾಲ ಇರಲಿದ್ದು, ಈ ಅವಧಿಯಲ್ಲಿ ಒಂದು ಕೋಟಿ ಭಗವದ್ಗೀತಾ ಸಮರ್ಪಣೆಯ ಸಂಕಲ್ಪ ಮಾಡಲಾಗಿದೆ.

ಪರ್ಯಾಯ ಪೂರ್ವವಾಗಿ ನಗರಕ್ಕೆ ಶನಿವಾರ ಸಂಜೆ ಆಗಮಿಸಿದ ಪುತ್ತಿಗೆ ಮಠದ ಕಿರಿಯ ಶ್ರೀಗಳಾದ ಸುಶ್ರೀಂದ್ರ ತೀರ್ಥ ಸ್ವಾಮೀಜಿ ಅವರು ಗಾಂಧಿ ಕಾಲೋನಿಯ ರಾಘವೇಂದ್ರ ಮಠದಲ್ಲಿ ಪೌರಸನ್ಮಾನ ಸ್ವೀಕರಿಸಿ, ಆಶೀರ್ವಚನ ನೀಡಿದರು.

'ಈ ಹಿಂದಿನ ಪರ್ಯಾಯ ಅವಧಿಯಲ್ಲಿ ಶ್ರೀಗಳು ಲಕ್ಷ ಗೀತಾ ಪಾರಾಯಣ ಮಾಡಿಸಿದ್ದರು. ಈ ಬಾರಿ ಕೋಟಿ ಗೀತಾ ಯಜ್ಞದ ಜತೆಗೆ ಅಂತರರಾಷ್ಟ್ರೀಯ ಗೀತಾ ಸಮ್ಮೇಳನ ನಡೆಸಲಾಗುವುದು. ಉಡುಪಿ ಕೃಷ್ಣಮಠಕ್ಕೆ ಮುಖ್ಯ ಪ್ರವೇಶ ಸ್ಥಳವಾದ ಕಲ್ಸಂಕದಲ್ಲಿ ಸ್ವಾಗತ ಗೋಪುರ, ಕೃಷ್ಣನನ್ನು ಕೈಯಲ್ಲಿ ಹಿಡಿದುಕೊಂಡಿರುವ ಭಂಗಿಯ ಮಧ್ವಾಚಾರ್ಯರ ಪ್ರತಿಮೆಯೊಂದಿಗೆ ಮಧ್ವೇಶ ವೃತ್ತ ಸ್ಥಾಪಿಸಲಾಗುವುದು. ಜತೆಗೆ ಗರ್ಭಗುಡಿಯೊಳಗೆ ಚಿನ್ನದ ರಥ ನಿರ್ಮಿಸಿ ನಿತ್ಯ ರಥೋತ್ಸವಕ್ಕೆ ವ್ಯವಸ್ಥೆ ಮಾಡಲಾಗುವುದು'. ಮಹಾಭಾರತದಲ್ಲಿ ಇಲ್ಲದ ವಿಷಯ ಯಾವುದೂ ಇಲ್ಲ. ಆಸಕ್ತರಿಗೆ ಒಂದು ಮುದ್ರಿತ ಗೀತಾ ಪುಸ್ತಕ, ಒಂದು ಖಾಲಿ ಪುಸ್ತಕ ಕೊಟ್ಟು, ಖಾಲಿ ಪುಸ್ತಕದಲ್ಲಿ ಗೀತೆಯನ್ನು ಬರೆಸುವುದು, ಅದನ್ನು ಉಡುಪಿಗೆ ತಂದು ವಾಚಿಸಿ ಕೃಷ್ಣನಿಗೆ ಸಮರ್ಪಿಸುವುದು, ಮಠದ ಮುದ್ರೆ, ಶ್ರೀಗಳ ಸಹಿಯೊಂದಿಗೆ ಪುನಃ ಪ್ರಸಾದ ರೂಪದಲ್ಲಿ ನೀಡಿ ಅದನ್ನು ಮನೆಯಲ್ಲಿ



ಪೂಜಿಸುವುದೇ ಈ ಕೋಟಿ ಗೀತಾ ಪ್ರವಚನದ ಮುಖ್ಯಾಂಶ' ಎಂದು ಶ್ರೀಗಳು ವಿವರಿಸಿದರು. ಬ್ರಾಹ್ಮಣ ಸಮಾಜದ ಅಧ್ಯಕ್ಷ ಕೆ.ದಿವಾಕರ, ಪ್ರಮುಖರಾದ ಗುರುರಾಜ ಆಚಾರ್, ಭೂಪಾಳ ರಾಘವೇಂದ್ರ ಶೆಟ್ಟಿ, ಶ್ರೀಪತಿ ಆಚಾರ್, ಸತೀಶ್ ರಾವ್ ಪಾವಂಜೆ, ನರಸಿಂಹಮೂರ್ತಿ, ವೆಂಕೋಬ ರಾವ್, ಗುರುರಾಜ ದಿಗ್ಗಾವಿ ಇತರರು ಇದ್ದರು.

**ಮನೆ ಮನೆಯಲ್ಲಿ ಗೀತೆ:** ಭಗವದ್ಗೀತೆಯನ್ನು ಸ್ವತಃ ಬರೆದು, ಶ್ರೀಕೃಷ್ಣನಿಗೆ ಅರ್ಪಿಸಿ, ವಾಪಸ್ ಪ್ರಸಾದ ರೂಪದಲ್ಲಿ ಮನೆಗೆ ತರುವ ಪುಸ್ತಕವನ್ನು ದೇವರ ಕೋಣೆಯಲ್ಲಿಟ್ಟು ಪೂಜಿಸುಬೇಕು ಎಂಬುದು ಪುತ್ತಿಗೆ ಶ್ರೀಗಳ ಆಶಯ. ಮುಂದಿನ ತಲೆಮಾರುಗಳ ಮಂದಿ ಸಹ ಅಪ್ಪ, ಅಜ್ಜ, ಮುತ್ತಜ್ಜ, ಅಜ್ಜಿ, ಮುತ್ತಜ್ಜಿ ಬರೆದ ಭಗವದ್ಗೀತೆ ಎಂಬ ಭಾವನೆಯೊಂದಿಗೆ ಗೀತಾ ಪ್ರವಚನ ಮಾಡುವಂತಾಗಬೇಕು ಎಂಬುದು ಇಡೀ ಪರಿಕಲ್ಪನೆಯ ಸಾರವಾಗಿದೆ ಎಂದರು.

# ಆಯುಷ್ ಇಲಾಖೆಗೆ ಬೇಕಿದೆ ಚಿಕಿತ್ಸೆ

**ಮೊದಲ ಪುಟದಿಂದ**

ಕಾರ್ಮಿಕ ಇಲಾಖೆಯ ಅಧಿಕಾರಿಗಳೊಂದಿಗೆ ಮಾಹಿತಿ ಪಡೆದುಕೊಂಡರು. ಸಭೆಯಲ್ಲಿ ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ ಸುಧೀರ್ಘ ಚರ್ಚೆ ನಡೆಯಿತು. ಸಿರುಗುಪ್ಪ ಶಾಸಕ ಬಿ.ಎಂ.ನಾಗರಾಜ, ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ರಾಹುಲ್ ಶರಣಪ್ಪ ಸಂಕನೂರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು, ಉಪ ಅರಣ್ಯ ಸಂರಕ್ಷಣಾಧಿಕಾರಿ ಸಂದೀಪ್ ಸೂರ್ಯವಂಶಿ, ಸಹಾಯಕ ಆಯುಕ್ತ ಹೇಮಂತ್ ಕುಮಾರ್ ಸೇರಿದಂತೆ ಜಿಲ್ಲೆಯ ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು

# ಸ್ವಚ್ಛ ವಾಹಿನಿಯರು ಸಮರ್ಪಕ ಕೆಲಸ ನಿರ್ವಹಿಸಿ



■ **ಹಂಪಿ ಟೈಮ್ಸ್ ರಾಯಚೂರು**

ವಾಹನ ಚಾಲನಾ ತರಬೇತಿ ಪಡೆದ ಸ್ವಚ್ಛ ವಾಹಿನಿಯರು ಸಮರ್ಪಕವಾಗಿ ಕೆಲಸ ನಿರ್ವಹಿಸಲು ಮುಂದಾಗಬೇಕೆಂದು ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಪ್ರಕಾಶ.ವಿ ಅವರು ಹೇಳಿದರು.

ಅವರು ಡಿ.1ರಂದು ನಗರದ ಆಶಾಪೂರು ರಸ್ತೆಯಲ್ಲಿರುವ ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಸಂಸ್ಥೆಯಲ್ಲಿ ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಸಂಜೀವಿನಿ-ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧ9ನ ಸಂಸ್ಥೆ, ಜಿಲ್ಲಾ ಪಂಚಾಯತ್ ರಾಯಚೂರುರವರ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಮಹಿಳೆಯರಿಗೆ ಘನತ್ಯಾಜ್ಯ ಕಸ ವಿಲೇವಾರಿ ವಾಹನ ಚಾಲನೆ ಮಾಡುವ ಸಮಾರೋಪ ತರಬೇತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಮಹಿಳೆಯರ ಆರ್ಥಿಕ ಭದ್ರತೆ, ಸ್ವಾವಲಂಬಿ ಬದುಕು, ಸಬಲೀಕರಣಕ್ಕಾಗಿ ವಾಹನ ಚಾಲನೆ ತರಬೇತಿ ನೀಡುವ ಮೂಲಕ ಜಿ.ಪಂ. ಮತ್ತೊಂದು ಮಹತ್ವದ ಹೆಜ್ಜೆಯತ್ತ ಸಾಗಿದೆ. ವಿವಿಧ ತಾಲೂಕಿನಿಂದ ಆಗಮಿಸಿದ 30 ಮಹಿಳೆಯರಿಗೆ ವಾಹನ ಚಾಲನೆಯ ತರಬೇತಿ ನೀಡಿ, ಆಯಾ ಗ್ರಾಮ ಪಂಚಾಯಿತಿಗಳಲ್ಲಿ ಕಸ ಸಂಗ್ರಹಣೆಯ ಸ್ವಚ್ಛ ವಾಹಿನಿಗಳಿಗೆ, ತರಬೇತಿ ಪಡೆದ ಮಹಿಳಾ ವಾಹನ ಚಾಲಕಿಯರನ್ನು ತೊಡಗಿಸಿಕೊಳ್ಳುವಂತೆ ಅವಕಾಶ ಕಲ್ಪಿಸಿ ಕೊಡಲಾಗಿದೆ ಎಂದರು.

ಈಗಾಗಲೇ ವಿವಿಧ ತಾಲೂಕಿನಲ್ಲಿ ತರಬೇತಿ ಪಡೆದ ಮಹಿಳೆಯರು ದಿನನಿತ್ಯ ವಾಹನ ಚಲಾಯಿಸುತ್ತಿದ್ದಾರೆ. ಈ ವಾಹನ ಚಾಲಕಿಯರಿಗೆ ಗ್ರಾ.ಪಂ.ನಿಂದ ವೇತನ ನೀಡಲಾಗುತ್ತಿದ್ದು, ಪುರುಷ ಚಾಲಕರಿಗೆ ನೀಡುವಷ್ಟೆ ವೇತನವನ್ನು ಮಹಿಳೆಯರಿಗೂ ನೀಡಲಾಗುತ್ತಿದೆ. ತರಬೇತಿ ಪಡೆದ ಮಹಿಳೆಯರಿಗೆ ಹಂತ-ಹಂತವಾಗಿ ಚಾಲನಾ ಕಾರ್ಯಕ್ಕೆ ಶೀಘ್ರ ಅಣಿಗೊಳ್ಳಲಿದ್ದಾರೆ. ತರಬೇತಿ ಪಡೆದ ಮಹಿಳೆಯರು ವಾಹನ ಚಲಾಯಿಸಲು ಹಿಂದೇಟು ಹಾಕದೇ ಸ್ವಚ್ಛತಾ ವಾಹಿನಿ ಚಾಲನೆ ಮಾಡಲು ಮುಂದಾಗಬೇಕು ಎಂದು ತಿಳಿಸಿದರು.

ಎನ್.ಆರ್.ಎಲ್.ಎಮ್ ಜಿಲ್ಲಾ ವ್ಯವಸ್ಥಾಪಕ ವಿಜಯ ಕುಮಾರ್ ಅವರು ಮಾತನಾಡಿ ಗ್ರಾಮ ಮಟ್ಟದಲ್ಲಿ ಘನ ತ್ಯಾಜ್ಯ ವಾಹನಕ್ಕೆ ವಾಹನ ಚಾಲಕಿಯರನ್ನಾಗಿ ಮಹಿಳೆಯರನ್ನು ಆಯ್ಕೆ ಮಾಡಲಾಗಿದ್ದು, ನೀವು ಧೈರ್ಯದಿಂದ ಹೆದರದೆ ವಾಹನ ಚಲಾವಣೆ ಮಾಡುವಲ್ಲಿ ಆಸಕ್ತಿ ವಹಿಸಿ ಕಲಿಯಬೇಕು. ನೀವು ವಾಹನ ಚಲಾವಣೆ ಮಾಡುವದರಿಂದ ಗ್ರಾಮದ ಮಹಿಳೆಯರಿಗೂ ಆತ್ಮವಿಶ್ವಾಸ ಹೆಚ್ಚಾಗುತ್ತದೆ. ಜೊತೆಗೆ ಮಹಿಳಾ ಸಬಲೀಕರಣವಾಗುತ್ತದೆ ಎಂದರು.

ಇದೇ ವೇಳೆ ಸ್ವಚ್ಛತಾ ಸಖಿರಿಗೆ ಪ್ರಮಾಣಪತ್ರ ವಿತರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಎಸ್.ಬಿ.ಐ ಆರ್.ಸೆ.ಟಿ ನಿರ್ದೇಶಕ ವಿಜಯ ಕುಮಾರ್, ತರಬೇತಿ ಅಶ್ವಿನಿ, 7 ತಾಲೂಕಿನ 33 ಮಹಿಳೆಯರು ಉಪಸ್ಥಿತರಿದ್ದರು.

# ಅಹನಾ ಸೌಹಾರ್ದ ಪತ್ತಿನ ಬ್ಯಾಂಕಿನಲ್ಲಿಟ್ಟ ಠೇವಣಿ, ಬಡ್ಡಿ ಸಮೇತ ಮರಳಿಸಲು ಆಗ್ರಹ




■ **ಹಂಪಿ ಟೈಮ್ಸ್ ಹೊಸಪೇಟೆ**

ನಗರದ ಅಮರಾವತಿಯಲ್ಲಿರುವ ಅಹನಾ ಸೌಹಾರ್ದ ಪತ್ತಿನ ಬ್ಯಾಂಕಿನಲ್ಲಿ ಠೇವಣಿಯಿಟ್ಟು ಅಸಲು ಮತ್ತು ಬಡ್ಡಿ ಸೌಲಭ್ಯದಿಂದ ವಂಚಿತರಾಗಿರುವ ನೊಂದ ಠೇವಣಿದಾರರು ಶನಿವಾರ ಸಹಾಯಕ ಆಯುಕ್ತರ ಆವರಣದಲ್ಲಿ ಠೇವಣಿ ಹಣ ಬಡ್ಡಿ ಸಮೇತ ತ್ವರಿತವಾಗಿ ಠೇವಣಿದಾರರಿಗೆ ಹಿಂತಿರುಗಿಸಬೇಕೆಂದು ಆಗ್ರಹಿಸಿ ಪ್ರತಿಭಟಿಸಿದರು.

ಠೇವಣಿದಾರರ ಸಂಘಟನೆಯ ಸಂಚಾಲಕ ವೈ.ಯಮುನೇಶ್ ಮಾತನಾಡಿ, ಅಹನಾ ಬ್ಯಾಂಕಿನಲ್ಲಿ ಠೇವಣಿ ಹಣ ಇಟ್ಟಿರುವ ಗ್ರಾಹಕರು ಕಳೆದ 3–4 ವರ್ಷಗಳಿಂದ ತಮ್ಮ ಠೇವಣಿ ಹಣ ಮತ್ತು ಬಡ್ಡಿ ಮರುಪಾವತಿಗಾಗಿ ಇಲಾಖೆಯ ಅಧಿಕಾರಿಗಳಿಗೆ ಬ್ಯಾಂಕಿನ ನಿರ್ದೇಶಿತ ಮಂಡಳಿಗೆ ಶಾಸಕರು ಮತ್ತು ಜಿಲ್ಲಾ ಉಸ್ತುವಾರಿ ಸಚಿವರಿಗೆ ಮನವಿ ಸಲ್ಲಿಸಿದ್ದಾರೆ. ನಿವೃತ್ತ ನೌಕರರು, ಮಧ್ಯಮ ವರ್ಗ ಹಾಗೂ ಜೀವನಕ್ಕೆ ಬೇರೆ ಆದಾಯ ಇಲ್ಲದವರು ತಾವು ಕಷ್ಟ ಪಟ್ಟು ಗಳಿಸಿದ ಹಣವನ್ನು ಅಹನಾ ಬ್ಯಾಂಕಿನಲ್ಲಿ ಠೇವಣಿ ಇಟ್ಟಿದ್ದು, ತಮ್ಮ ವೃದ್ಧಾಪ್ಯ ಹಾಗೂ ಕಷ್ಟಕಾಲದಲ್ಲಿ ಮಕ್ಕಳ ವಿದ್ಯಾಭ್ಯಾಸ, ಮದುವೆ, ಮನೆ ಕಟ್ಟಲು ಹಣಹೂಡಿಕೆ ಉದ್ದೇಶದಿಂದ ಠೇವಣಿ ಇಟ್ಟಿದ್ದಾರೆ. ಬ್ಯಾಂಕಿನ ಆಡಳಿತ ಮಂಡಳಿಯವರು ಠೇವಣಿ ಹಣವನ್ನು ಅವ್ಯವಹಾರ ಮಾಡಿದ್ದಾರೆ ಎಂದು ಆರೋಪಿಸಿದರು. ಆಡಳಿತ ಮಂಡಳಿಯ ನಿರ್ಲಕ್ಷ್ಯದಿಂದ ನೂರಾರು ಕುಟುಂಬಗಳು ಬೀದಿಪಾಲಾಗಿದ್ದಾರೆ. ಈಗಾಗಲೇ ಬ್ಯಾಂಕಿನ ಅವ್ಯವಹಾರದ ವಿರುದ್ಧ ಧಾರವಾಡ ಹೈಕೋರ್ಟ್ ಪೀಠದಲ್ಲಿ ಮೊಕ್ಕದ್ದಮೆ ದಾಖಲಾಗಿದೆ. ತಡವಾಗಿ ಯಾದರೂ ಸರ್ಕಾರ ಠೇವಣಿದಾರರಿಗೆ ನ್ಯಾಯ ಕೊಡುತ್ತೆ ಎಂಬ ಆಶಾ ಭಾವನೆ ಮೂಡಿದ್ದು, ಈ ನಿಟ್ಟಿನಲ್ಲಿ ಹೊಸಪೇಟೆಯ ಸಹಾಯಕ ಆಯುಕ್ತರ ಕಛೇರಿಯಲ್ಲಿ ಠೇವಣಿದಾರರ ಹಣದ ವಿವರಗಳನ್ನು ಪಡೆಯಲಾಗುತ್ತಿದೆ. ನ. 7ರಿಂದ ಈ ಪ್ರಕ್ರಿಯೆ ಆರಂಭವಾಗಿದ್ದು ಡಿ. 6ನೇ ತಾರೀಖಿನ ಒಳಗಾಗಿ ನೊಂದ ಠೇವಣಿದಾರರು ತಮ್ಮ ಅಸಲು ಮತ್ತು ಬಡ್ಡಿಯ ವಿವರಗಳನ್ನು ನಿಗಧಿತ ಅರ್ಜಿಯಲ್ಲಿ ತುಂಬಿ ಸಹಾಯಕ ಆಯುಕ್ತರ ಕಾರ್ಯಾಲದಲ್ಲಿ ಸಲ್ಲಿಸಬೇಕು. ಆಧಾರ್‌ಕಾರ್ಡ್, ಪಾನ್‌ಕಾರ್ಡ್, ಠೇವಣಿ ರಶೀದಿ, ಬ್ಯಾಂಕ್ ಪಾಸ್ ಮೂಲ ಪ್ರತಿ, ಹಾಗೂ ಜೆರಾಕ್ಸ್ ಪ್ರತಿಗಳನ್ನು ಕಛೇರಿಯಲ್ಲಿ ತೋರಿಸಿ ಅರ್ಜಿ ಪಡೆದು ಠೇವಣಿಯ ವಿವರಗಳನ್ನು ಸಲ್ಲಿಸಬೇಕು. ನಿಗಧಿತ ದಿನಾಂಕದೊಳಗಾಗಿ ಅರ್ಜಿ ಸಲ್ಲಿಸುವ ಠೇವಣಿದಾರರಿಗೆ ಮಾತ್ರ ಠೇವಣಿ ಹಣ ವಾಪಾಸಾಗುತ್ತದೆ ಎಂದರು.

ಈ ಸಂದರ್ಭದಲ್ಲಿ ಅಹನಾ ಸೌಹಾರ್ದ ಬ್ಯಾಂಕಿನ ಠೇವಣಿದಾರರ ಹಿತರಕ್ಷಣ ಸಮಿತಿಯ ಸಂಚಾಲಕರಾದ ವೈ.ಯಮುನೇಶ್, ಅಧ್ಯಕ್ಷರಾದ ಪಾಂಡುರಂಗರಾವ್, ಉಪಾಧ್ಯಕ್ಷ ರಾದ ಶ್ರೀಧರ್, ಕಾರ್ಯದರ್ಶಿ ಹೆಚ್.ರಾಮೇಶ್ವರ್, ಜಂಟಿ ಕಾರ್ಯದರ್ಶಿ ಎಸ್.ವೆಂಕಟೇಶ್, ಖಜಾಂಚಿ ಎಸ್.ಶ್ರೀನಿವಾಸ್ ಅಸಂಖ್ಯಾತ ಠೇವಣಿದಾರರು ಪಾಲ್ಗೊಂಡಿದ್ದರು.

ಮೈಕ್ರೋ ನ್ಯೂಸ್

## ಡಿ.3ರಂದು ವಿಶ್ವ ವಿಕಲಚೇತನರ ದಿನಾಚರಣೆ ಕಾರ್ಯಕ್ರಮ



**ಹಂಪಿ ಟೈಮ್ಸ್ ಹೊಸಪೇಟೆ**
ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ತಾಲ್ಲೂಕು ಕಾನೂನು ಸೇವಾ ಸಮಿತಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ನಗರಾಭಿವೃದ್ಧಿ ಕೋಶ ಹಾಗೂ ಜಿಲ್ಲೆಯಲ್ಲಿ ವಿಕಲಚೇತನರ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಯಂ ಸೇವಾ ಸಂಸ್ಥೆಗಳು ಮತ್ತು ಸಂಘ ಸಂಸ್ಥೆಗಳ ಸಹಯೋಗದಲ್ಲಿ ವಿಶ್ವ ವಿಕಲಚೇತನರ ದಿನಾಚರಣೆ ಕಾರ್ಯಕ್ರಮವನ್ನು ಡಿ.3ರಂದು ಬೆಳಿಗ್ಗೆ 10.30 ಗಂಟೆಗೆ ಪಟೇಲ್ ನಗರದ ಶ್ರೀ ವೆಂಕಟೇಶ್ವರ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದೆ.

**ಮೆರವಣಿಗೆ:** ಬೆಳಿಗ್ಗೆ 9ಕ್ಕೆ ಹೊಸಪೇಟೆ ನಗರದ ನೆಹರು ಕಾಲೋನಿಯ ಸಹಕಾರಿ ಕಲ್ಯಾಣ ಮಂಟಪದ ಮುಂಬಾಗದಿಂದ ಶ್ರೀ ಪುಟ್ಟರಾಜ ಗವಾಯಿಗಳ ಭಾವಚಿತ್ರದ ಮೆರವಣಿಗೆ ಹಾಗೂ ವಿಕಲಚೇತನರ ಮೋಟಾರ್ ವಾಹನ ಜಾಥವು ವಾಲ್ಮೀಕಿ ವೃತ್ತ, ಉದ್ಯೋಗ ಪೆಟ್ರೋಲ್ ಬಂಕ್, ಮಸೀದಿ ಮಾರ್ಗ, ಗಾಂಧಿ ಚೌಕ್, ಪುನೀತ್ ರಾಜ್‌ಕುಮಾರ್ ವೃತ್ತದಿಂದ ಶ್ರೀ ವೆಂಕಟೇಶ್ವರ ಕಲ್ಯಾಣ ಮಂಟಪದವರೆಗೆ ನಡೆಯಲಿದೆ ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಕೃಷ್ಣಾಸಾ ಎಲ್. ಬಾಕಳೆ ತಿಳಿಸಿದ್ದಾರೆ.

## ಕಾನೂನು ಸೇವೆಗಳ ಪ್ರಾಧಿಕಾರದಿಂದ ವಿಶ್ವ ವಿಕಲಚೇತನರ ದಿನಾಚರಣೆ ಡಿ.3ಕ್ಕೆ

**ಹಂಪಿ ಟೈಮ್ಸ್ ಹೊಸಪೇಟೆ**
ಬಳ್ಳಾರಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಹೊಸಪೇಟೆ ತಾಲ್ಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ ಮತ್ತು ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲಿಕರಣ ಇಲಾಖೆ ಸಂಯುಕ್ತಾಶ್ರಯದಲ್ಲಿ ವಿಶ್ವ ವಿಕಲಚೇತನರದಿನಾಚರಣೆಕಾರ್ಯಕ್ರಮವನ್ನು ಡಿ.3ರಂದು ಬೆಳಿಗ್ಗೆ 9.30 ಗಂಟೆಗೆ ನಗರದ ಸಹಕಾರಿ ಕಲ್ಯಾಣ ಮಂಟಪದಲ್ಲಿ ಏರ್ಪಡಿಸಲಾಗಿದೆ.

ಹೊಸಪೇಟೆ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಅಬ್ದುಲ್ ರಹೀಮಾನ ಎ. ನಂದಗಡಿ ಕಾರ್ಯಕ್ರಮ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಹೊಸಪೇಟೆ ತಾಲ್ಲೂಕು ಕಾನೂನು ಸೇವಾ ಸಮಿತಿ ಅಧ್ಯಕ್ಷರಾದ ಹೇಮಲತಾ ಬಿ. ಸೇರಿದಂತೆ ನ್ಯಾಯಾಧೀಶರು, ವಕೀಲರು ಉಪಸ್ಥಿತರಿರಲಿದ್ದಾರೆ.

## ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ: ಅರ್ಜಿ ಸಲ್ಲಿಕೆಯ ಅವಧಿ ವಿಸ್ತರಣೆ

**ಹಂಪಿ ಟೈಮ್ಸ್ ಬಳ್ಳಾರಿ**
ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ವತಿಯಿಂದ 2023-24 ನೇ ಸಾಲಿನಲ್ಲಿ ವಿವಿಧ ನಿಗಮಗಳಿಗೆ ಸಂಬಂಧಿಸಿದಂತೆ ವಿವಿಧ ಯೋಜನೆಗಳಡಿ ಸಾಲ ಸೌಲಭ್ಯ ಪಡೆಯಲು ಈಗಾಗಲೇ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಕೆಯ ಅವಧಿಯನ್ನು ಡಿಸೆಂಬರ್ 15 ರವರೆಗೆ ವಿಸ್ತರಿಸಲಾಗಿದೆ ಎಂದು ನಿಗಮದ ಜಿಲ್ಲಾ ವ್ಯವಸ್ಥಾಪಕರು ತಿಳಿಸಿದ್ದಾರೆ.

ಅಧೀನದಲ್ಲಿ ಬರುವ ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ ಹಾಗೂ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ, ಕರ್ನಾಟಕ ತಾಂಡ ಅಭಿವೃದ್ಧಿ ನಿಗಮಗಳಿಂದ. ಸ್ವಯಂ ಉದ್ಯೋಗ ನೇರಸಾಲ ಯೋಜನೆ, ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆ, ಮೈಕ್ರೋ ಕ್ರೆಡಿಟ್ ಪ್ರೇರಣಾ ಯೋಜನೆ (ಮಹಿಳಾ ಸ್ವ-ಸಹಾಯ ಗುಂಪುಗಳಿಗೆ), ಸ್ವಾವಲಂಬಿ ಸಾರಥಿ ಯೋಜನೆ, ಗಂಗಾ ಕಲ್ಯಾಣ ಯೋಜನೆ, ಭೂ ಒಡೆತನ ಯೋಜನೆಯನ್ನು ಅನುಷ್ಠಾನಗೊಳಿಸಲು ಸೇವಾ ಸಿಂಧು, ಗ್ರಾಮ ಒನ್, ಕರ್ನಾಟಕ ಒನ್‌ನಲ್ಲಿ ಅನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ ಎಂದು ತಿಳಿಸಿದ್ದಾರೆ.

# ಸರ್ಕಾರ ಮನೆ ಕೊಟ್ರು ಗುತ್ತಿಗೆದಾರ ಕೊಡ್ತಿಲ್ಲ

## ಗುತ್ತಿಗೆ ಇಂಜಿನಿಯರ್ ತಿರಸ್ಕಾರಕ್ಕೆ ಜನಾಕ್ರೋಶ ಜಿಲ್ಲಾಧಿಕಾರಿಯತ್ತ ಚಿತ್ತನೆಟ್ಟ ಸಾರ್ವಜನಿಕರು

**ಹಂಪಿ ಟೈಮ್ಸ್ ಕೊಟ್ಟೂರು**
ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯು ಕೊಟ್ಟೂರು ಪಟ್ಟಣಕ್ಕೆ ಮಂಜೂರು ಮಾಡಿರುವ 411 ಮನೆಗಳಲ್ಲಿ, 240 ಮನೆಗಳು ಮಾತ್ರ ಪ್ರಸ್ತುತ ನಿರ್ಮಾಣಗೊಂಡಿದ್ದು, ಉಳಿದ 171 ಮನೆಗಳಿಗೆ ಅರ್ಹ ಪಲಾನುಭವಿಗಳಿಂದ ಡಿಡಿ ಪಡೆಯಲು ಕ.ಕೊ.ಅ.ಮಂ ಪ್ರಥಮ ಗುತ್ತಿಗೆಯ ಇಂಜಿನಿಯರ್ ತಿರಸ್ಕರಿಸುತ್ತಿದ್ದಾರೆ ಎಂದು ಸಾರ್ವಜನಿಕರಿಂದ ಗಂಭೀರ ಆರೋಪ.

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯು 1973 ಕಾಯ್ದೆ ಪ್ರಕಾರ ಸ್ಥಾಪನೆಯಾದ 1975 ರಿಂದ ಕೊಳಚೆ ಪ್ರದೇಶಗಳ ನಿವಾಸಿಗಳ ವಸತಿ ಮತ್ತು ಮೂಲ ಭೂತ ಸೌಕರ್ಯಗಳನ್ನು ಪೂರೈಸಲು ಮಹತ್ತರ ಯೋಜನೆಯನ್ನು ರೂಪಿಸುತ್ತ ಬಂದಿದೆ.

ಇದೇ ನಿಟ್ಟಿನಲ್ಲಿ 2021-2022 ನೇ ಸಾಲಿನ ಆಯವ್ಯಯದಲ್ಲಿ ನಗರ ಸ್ಥಳೀಯ ಸಂಸ್ಥೆಗೆ ಹಂಚಿಕೆ ಮಾಡಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ವತಿಯಿಂದ ಎಸ್.ಎಫ್.ಸಿ ಮುಕ್ತನಿದಿ ಮತ್ತು ಎಸ್.ಸಿ.ಎಸ್.ಪಿ ಹಾಗೂ ಟಿ.ಎಸ್.ಪಿ ಯೋಜನೆ ಅನುದಾನದಿಂದ ಬಿಡುಗಡೆ ಮಾಡಿ ಕೊಟ್ಟೂರು ಪಟ್ಟಣದ ಕೊಳಚೆ ಪ್ರದೇಶದ ನಿವಾಸಿಗಳಿಗೆ ವಸತಿ ಕಲ್ಪಿಸಲು 411 ಮನೆಗಳನ್ನು ಮಂಜೂರು ಮಾಡಿದೆ.

ಕೊಟ್ಟೂರು ಪಟ್ಟಣದ ಕೊಳಚೆ ಪ್ರದೇಶದ ಕೇವಲ 240 ಮನೆಗಳು ಮಾತ್ರ ನಿರ್ಮಾಣಗೊಂಡಿದ್ದು 171 ಮನೆಗಳು ಖಾಲಿ ಉಳಿದಿವೆ.ಖಾಲಿ ಉಳಿದ ಮನೆಗಳಿಗೆ ಡಿಡಿ ಕಟ್ಟುವ ಬಗ್ಗೆ ಜನರು ಕೇಳಿದರೆ ಈಗಾಗಲೆ ಯಾವುದೇ ಹೊಸ ಡಿಡಿಗಳನ್ನು ಪಡೆಯುತ್ತಿಲ್ಲ ಎಂದು ಗುತ್ತಿಗೆದಾರರ ಇಂಜಿನಿಯರ್ ಹೇಳಿ ಕಳಿಸುತ್ತಿರುವ ಬಗ್ಗೆ ಸಾರ್ವಜನಿಕರು ಆರೋಪ ಮಾಡುತ್ತಿರುವರು.

ಕೊಟ್ಟೂರು ಪಟ್ಟಣದಲ್ಲಿ ಇನ್ನೂ ಇಷ್ಟು ಮನೆ ಬಂದರು ಕಟ್ಟಿಸಿಕೊಳ್ಳುವಷ್ಟು ಬಡಜನ ಕೊಳಚೆ ಪ್ರದೇಶದಲ್ಲಿದ್ದು ಕೇವಲ ಒಂದೇ ವರ್ಷದ ಅವಧಿಯಲ್ಲಿ ಇಂತಹ ಮಹತ್ತರ ಯೋಜನೆಯನ್ನು ನಿಲ್ಲಿಸುತ್ತಿರುವುದು ಸೂಕ್ತವಲ್ಲ ಇದರ ಅವಧಿಯನ್ನು ಇನ್ನೂ ಒಂದು ವರ್ಷ ಮುಂದೂಡಿದರೆ ಇಲ್ಲಿಗೆ ಮುಂಜೂರಾಗಿರುವ ಮನೆಗಳು ಪೂರ್ಣಗೊಳ್ಳುತ್ತವೆ.ಈ ಬಗ್ಗೆ ಶೀಘ್ರ ವಿಜಯನಗರ ಜಿಲ್ಲಾಧಿಕಾರಿಗಳು ಗಮನ ಹರಿಸಬೇಕೆಂದು ಸ್ಥಳೀಯರು ಆಗ್ರಹಿಸಿದರು.

> ಕೊಟ್ಟೂರು ಪಟ್ಟಣಕ್ಕೆ 411 ಮನೆಗಳು ಎಚ್ಚೇನಲ್ಲ, ಇನ್ನೂ ಇಷ್ಟು ಬೇಕಾಗುತ್ತವೆ, ಆದರೆ ಈ ಮನೆಗಳ ಬಗ್ಗೆ ಗುತ್ತಿಗೆದಾರರು ಸರಿಯಾಗಿ ಮಾಹಿತಿ ನೀಡುತ್ತಿಲ್ಲ, 7 ಲಕ್ಷ ರೂ.ವೆಚ್ಚದ ಮನೆ ಎಂದು ಹೇಳುತ್ತಾರೆ, ಆದರೆ ಕೂಲಿ ಮತ್ತು ಮನೆ ನಿರ್ಮಾಣ ಸಾಮಾಗ್ರಿ ಸೇರಿ ಪಲಾನುಭವಿಗಳಿಗೆ ಕೇವಲ 3 ರಿಂದ 4 ಲಕ್ಷ ರೂ.ಮಾತ್ರ ದೊರೆಯುತ್ತೆ, ಇದಕ್ಕೆ ಎಸ್.ಸಿ ಮತ್ತು ಎಸ್ಟಿ ಪಲಾನುಭವಿ 69 ಸಾವಿರ, ಇತರೆ ಜನಾಂಗ 1.4 ಲಕ್ಷ ರೂ. ಮೊದಲು ಡಿಡಿ ಕಟ್ಟಬೇಕು. ಉಳಿದಿದ್ದು ಸಾಲ ಮಾಡಿ ನಿರ್ಮಿಸಿಕೊಳ್ಳಬೇಕು, ಇದು ಕಡುಬಡವರಿಗೆ ಕಷ್ಟವಾಗಿದೆ. ಹಾಗಾಗಿ ಇನ್ನೂ 171 ಮನೆಗಳು ಖಾಲಿ ಉಳಿದಿವೆ. ಈ ಬಗ್ಗೆ ಬೆಂಗಳೂರು ಕಕೊಅಮಂ ಕಮಿಷನರ್ ಹಾಗೂ ವಿಜಯನಗರ ಜಿಲ್ಲಾಧಿಕಾರಿಗಳು ಗಮನಹರಿಸಬೇಕು.
>
> – **ವಂಸತ ಕುಮಾರ್** ನಾಗರಿಕ ಕೊಟ್ಟೂರು.

> ಕೊಟ್ಟೂರು ಪಟ್ಟಣದಲ್ಲಿ 240 ಮನೆಗಳು ನಿರ್ಮಾಣಗೊಂಡಿದ್ದು 171 ಮನೆಗಳು ಬಾಕಿ ಇವೆ ಒಬ್ಬಿಬ್ಬರು ಬಿಟ್ಟರೆ ಬೇರೆ ಯಾರು ಮನೆ ನಿರ್ಮಿಸಿಕೊಳ್ಳಲು ಬರುತ್ತಿಲ್ಲ ಹಾಗಾಗಿ ಹೊಸ ಡಿಡಿ ಗಳನ್ನು ನಿಲ್ಲಿಸಿದ್ದೇವೆ.
>
> – **ಯೂಸೂಫ್, ಕಕೊಅಮಂ ಗುತ್ತಿಗೆ ಇಂಜಿನಿಯರ್.**

# ಕೊಪ್ಪಳ ವಿವಿ ಕುಲಪತಿ ಪ್ರೊ.ಬಿ.ಕೆ. ರವಿಗೆ ವಿ.ಪಿ.ಸಿಂಗ್ ಪ್ರಶಸ್ತಿ ಪ್ರದಾನ



**ಹಂಪಿ ಟೈಮ್ಸ್ ಬೆಂಗಳೂರು**
ಶುಕ್ರವಾರ ಸಂಜೆ ಬೆಂಗಳೂರಿನ ಕ್ವೀನ್ಸ್ ರಸ್ತೆಯ ಕೃಷಿ ತಂತ್ರಜ್ಞಾನ ಸಂಸ್ಥೆಯ ಅರಕೇರಿ ಸಭಾಂಗಣದಲ್ಲಿ ನಡೆದ ಕರ್ನಾಟಕ ಹಿಂದುಳಿದ ವರ್ಗಗಳ ಮಾನ್ಯತೆ ಪಡೆದ ಸಂಪಾದಕರ ಮತ್ತು ವರದಿಗಾರರ ಸಂಘ ಹಾಗೂ ಐಎಚ್‌ಎಸ್ ಪ್ರಕಾಶನ ಸಹಯೋಗದಲ್ಲಿ 'ಮಂಡಲ್ ವರದಿ ಆಗಿದ್ದೇನು?' ವಿಷಯ ಕುರಿತು ವಿಚಾರ ಸಂಕಿರಣ ಅಂಗವಾಗಿ ಕರ್ನಾಟಕ ರಾಜ್ಯ ಕುರುಬರ ಸಂಘದ ನಿಕಟಪೂರ್ವ ಅಧ್ಯಕ್ಷರಾಗಿ, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಸದಸ್ಯರಾಗಿ, ಹಿಂದುಳಿದ ಜಾತಿಗಳ ಒಕ್ಕೂಟದ ಮಾಜಿ ಗೌರವಾಧ್ಯಕ್ಷರಾಗಿ ಹಾಗೂ ಬೆಂಗಳೂರು ವಿಶ್ವವಿದ್ಯಾಲಯದ ಸಂವಹನ ವಿಭಾಗದ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ಪ್ರಸ್ತುತ ಕೊಪ್ಪಳ ವಿಶ್ವವಿದ್ಯಾಲಯದ ನೂತನ ಕುಲಪತಿಗಳಾದ ಪ್ರೊ.ಬಿ.ಕೆ.ರವಿ ಅವರಿಗೆ ವಿ ಪಿ ಸಿಂಗ್ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಇದೇ ಸಂದರ್ಭದಲ್ಲಿ ಮಾಜಿ ಸಚಿವ ಎಚ್.ಎಂ.ರೇವಣ್ಣ, ವಿಧಾನ ಪರಿಷತ್ತಿನ ಮಾಜಿ ಸಭಾಪತಿ ವಿ.ಆರ್. ಸುದರ್ಶನ್, ಮಾಜಿ ಸಚಿವ ಎಚ್.ಆಂಜನೇಯ, ಚಿತ್ರದುರ್ಗ ಜಿಲ್ಲೆಯ ಹಿರಿಯೂರು ನಗರದ ಆದಿಜಾಂಬವ ಬೃಹನ್ಮಠದ ಷಡಕ್ಷರ ಮುನಿ ದೇಶೀಕೇಂದ್ರ ಸ್ವಾಮೀಜಿ, ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಎಚ್. ಕಾಂತರಾಜ, ಬೆಂಗಳೂರಿನ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆಯ ಡಾ. ಮನೋಹರ್ ಯಾದವ್, ಪ್ರಜಾಪ್ರಗತಿ ಕನ್ನಡ ಪತ್ರಿಕೆ ಸಂಪಾದಕ ಎಸ್ ನಾಗಣ್ಣ, ಹಿಂದುಳಿದ ಜಾತಿಗಳ ಒಕ್ಕೂಟದ ಅಧ್ಯಕ್ಷ ಕೆ.ಎಂ.ರಾಮಚಂದ್ರಪ್ಪ, ಕರ್ನಾಟಕ ಹಿಂದುಳಿದ ವರ್ಗಗಳ ಮಾನ್ಯತೆ ಪಡೆದ ಸಂಪಾದಕರ ಮತ್ತು ವರದಿಗಾರರ ಸಂಘದ ಅಧ್ಯಕ್ಷ ಕೆ.ಆರ್.ನೀಲಕಂಠ ಮತ್ತಿತರ ಗಣ್ಯರು ಪ್ರಶಸ್ತಿ ಪ್ರದಾನ ಮಾಡಿದರು.

# ಜಾನಪದ ಸಂಪ್ರದಾಯ ಸೋಬಾನ ಪದಗಳು ಎಲ್ಲೆಡೆ ಮೊಳಗಲಿ

**ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ**
ಸಂಪ್ರದಾಯ ಸೋಬಾನ ಪದಗಳು ಇನ್ನಷ್ಟು ಜನಪ್ರಿಯಗೊಳ್ಳಲಿ ಎಂದು ಗೊರವಪ್ಪನವರ ಸಂಘದ ಅಧ್ಯಕ್ಷರು ಹಾಗೂ ಜಾನಪದ ಕಲಾ ರತ್ನ ಪುರಸ್ಕೃತರಾದ ಎಸ್.ನಿಂಗನಗೌಡ್ರು ಹೇಳಿದರು.

ತಾಲೂಕಿನ ಸೊನ್ನ ಗ್ರಾಮದಲ್ಲಿ ಶ್ರೀದುರುಗಮ್ಮ ದೇವಿ ಪರಿಶಿಷ್ಟ ಜಾತಿ ಮಹಿಳಾ ಜಾನಪದ ಕಲಾ ಸಂಘ ಹಾಗೂ ಬಳ್ಳಾರಿಯ ಕನ್ನಡ ಮತ್ತು ಸಂಸ್ಕೃತ ಇಲಾಖೆಯ ಸಹಯೋಗ ದೊಂದಿಗೆ,ಬುಧವಾರಹಮ್ಮಿಕೊಂಡಿದ್ದ ಸಂಪ್ರದಾಯ ಸೋಬಾನ ಪದಗಳ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಜಾನಪದ ಕಲೆಗಳು ಗ್ರಾಮೀಣ ಪ್ರದೇಶದಲ್ಲಿ ಮಾತ್ರ ಉಳಿಯುತ್ತಿವೆ. ಇವುಗಳನ್ನು ಪಟ್ಟಣದಲ್ಲೂ ಪ್ರೋತ್ಸಹಿಸಿದಾಗಲೇ ಗ್ರಾಮೀಣ ಪ್ರದೇಶ ಕಲೆಗಳು ಉಳಿಯಲು ಸಾಧ್ಯ ಎಂದರು.

ಈ ಸಂದರ್ಭದಲ್ಲಿ ಪಿಡಿಒ ಎಂ. ಎಂ.ಭೋಗೇಶ್, ಕಸಾಪ ಸದಸ್ಯರಾದ ಉಪ್ಪಾರ್ ಕನಕಪ್ಪ, ಜನನಿ ಟ್ರಸ್ಟ್‌ನ ಅಧ್ಯಕ್ಷ ಯು.ಕೇಶವಮೂರ್ತಿ, ಸೋಬಾನ ಪದಗಳ ಸಂಘದ ಅಧ್ಯಕ್ಷೆ ಎಂ.ಮೈಲವ್ವ ಸೇರಿದಂತೆ ಗ್ರಾಮದ ಮುಖಂಡರು ಪಾಲ್ಗೊಂಡಿದ್ದರು. ಬಳಿಕ ಸೋಬಾನ ಪದಗಳನ್ನಾಡುವ ಮೂಲಕ ಪ್ರೇಕ್ಷಕರ ಗಮನ ಸೆಳೆದರು.




# ಅರ್ಜಿಗಳು ತಿರಸ್ಕೃತಗೊಂಡಿದ್ದರೆ SMS ಮೂಲಕ ಮೇಲ್ಮನವಿಗೆ ಸಲ್ಲಿಸಿ

**ಹಂಪಿ ಟೈಮ್ಸ್ ಬಳ್ಳಾರಿ**
ಸಕಾಲ ಅಧಿಸೂಚಿತ ಸೇವೆಗಳ ಅಡಿಯಲ್ಲಿ ಸಲ್ಲಿಸುವ ಅರ್ಜಿಗಳು ತಿರಸ್ಕೃತಗೊಂಡಿದ್ದರೆ ಅಂತಹವರ ನೋಂದಾಯಿತ ಮೊಬೈಲ್ ಸಂಖ್ಯೆಗೆ ಪ್ರಥಮ ಮೇಲ್ಮನವಿ ಸಲ್ಲಿಸಲು ಅನುಕೂಲವಾಗುವಂತೆ ಲಿಂಕ್‌ಗಳನ್ನು ಕಳುಹಿಸುವ ವ್ಯವಸ್ಥೆಯನ್ನು ಸಕಾಲ ಮಿಷನ್ ರಾಜ್ಯದಲ್ಲಿ ಜಾರಿಗೆ ತಂದಿದೆ.

ಅರ್ಜಿ ತಿರಸ್ಕೃತಗೊಂಡಿದ್ದಲ್ಲಿ ಅರ್ಜಿದಾರರು ಸಕ್ಷಮ ಪ್ರಾಧಿಕಾರಿಗೆ ಪ್ರಥಮ ಮೇಲ್ಮನವಿಯನ್ನು ಸಲ್ಲಿಸಲು ಸಕಾಲ ಮಿಷನ್ ಅವಕಾಶ ಕಲ್ಪಿಸಿದೆ. ನಾಗರೀಕರುಈಅವಕಾಶವನ್ನುಪರಿಣಾಮಕಾರಿಯಾಗಿ ಹಾಗೂ ಸುಲಭವಾಗಿ ಬಳಸಿಕೊಳ್ಳಲು ಅನುವು ಮಾಡಿಕೊಡುವ ಉದ್ದೇಶದಿಂದ ಅಪೀಲು ಹಾಕಲು ಲಿಂಕ್‌ನ್ನು ಎಸ್‌ಎಂಎಸ್ ಮೂಲಕ ಕಳುಹಿಸುವ ವ್ಯವಸ್ಥೆ ಮಾಡಲಾಗಿದೆ ಎಂದು ಸಕಾಲ ಮಿಷನ್‌ನ ಹೆಚ್ಚುವರಿ ಯೋಜನಾ ನಿರ್ದೇಶಕಿ ಪಲ್ಲವಿ ಆಕುರಾತಿ ಅವರು ತಿಳಿಸಿದ್ದಾರೆ.

ತಿರಸ್ಕೃತಗೊಂಡ ಅರ್ಜಿಗಳಿಗೆ ಸಂಬಂಧಿಸಿದಂತೆ ಸ್ವಯಂಚಾಲಿತವಾಗಿ ಎಸ್‌ಎಂಎಸ್ ಕಳುಹಿಸುವ ಸೇವೆಯನ್ನು ಸೆಪ್ಟೆಂಬರ್ ತಿಂಗಳಿನಿಂದ ಚಾಲನೆಗೊಳಿಸಿದೆ. ವಿದ್ಯುನ್ಮಾನ ನಾಗರೀಕ ಸೇವಾ ವಿತರಣಾ ನಿರ್ದೇಶನಾಲಯದಿಂದ ಇದುವರೆಗೆ ಒಟ್ಟು 3,18,420 ಎಸ್‌ಎಂಎಸ್‌ಗಳನ್ನು ಕಳುಹಿಸಲಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ. ಸಾರಿಗೆ ಇಲಾಖೆಯಲ್ಲಿ ಅರ್ಜಿಗಳ ಮಾಹಿತಿಯನ್ನು ಸಕಾಲ ತಂತ್ರಾಂಶಕ್ಕೆ ಮ್ಯಾನ್ಯುಯಲ್ ಆಗಿ ಪುಶ್ ಮಾಡುತ್ತಿದ್ದು, ಇದನ್ನು ಅಟೋಪುಷ್‌ಗೆ ಬದಲಾಯಿಸಲಾಗಿದೆ. ಇದರಿಂದ, ಸಕಾಲದಲ್ಲಿ ಬಾಕಿ ಇದ್ದ ಅರ್ಜಿಗಳ ಸಂಖ್ಯೆಯು ಗಣನೀಯವಾಗಿ ಇಳಿಕೆಗೊಂಡು 9691 ರಿಂದ 2682 ಗಳಿಗೆ ಇಳಿಕೆಯಾಗಿದೆ ಎಂದು ಪಲ್ಲವಿ ಅವರು ತಿಳಿಸಿದ್ದಾರೆ.

ದಿನದಿಂದ ದಿನಕ್ಕೆ ಜನಪ್ರಿಯವಾಗುತ್ತಿರುವ ಸಕಾಲ ಯೋಜನೆಯಡಿ ಅರ್ಜಿ ಸಲ್ಲಿಸುತ್ತಿರುವವರ ಸಂಖ್ಯೆಯನ್ನು ಗಮನಿಸಿ ಸಕಾಲ ಮಿಷನ್ ಹೊಸ ಹೊಸ ಸೇವೆಗಳನ್ನು ಸೇರ್ಪಡೆಗೊಳಿಸುತ್ತಿದೆ. ಕಳೆದ ಮೂರು ತಿಂಗಳ ಅವಧಿಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅಸ್ತಿತ್ವದಲ್ಲಿರುವ ದೂರ ಸಂಪರ್ಕ ಮೂಲಸೌಕರ್ಯ ಗೋಪುರಕ್ಕೆ ಅನುಮತಿ/ನಿಯಮಿತಗೊಳಿಸುವಿಕೆ ಮತ್ತು ಹೊಸ/ ಅಸ್ತಿತ್ವದಲ್ಲಿರುವ ಓವರ್‌ಗ್ರೌಂಡ್ ಕೇಬಲ್ ಮೂಲಸೌಕರ್ಯ/ಭೂಗತ ಕೇಬಲ್ ಮೂಲಸೌಕರ್ಯಕ್ಕಾಗಿ ಅನುಮತಿ/ನಿಯಮಿತಗೊಳಿಸುವಿಕೆಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಉತ್ತೇಜನ ನೀಡುವ ಯೋಜನೆಗಳನ್ನು ಸಹ ಸಕಾಲದ ಅಡಿಯಲ್ಲಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ಮಾಡಿದೆ ಎಂದು ಆಕುರಾತಿ ಅವರು ತಿಳಿಸಿದ್ದಾರೆ.

ಹಂಪಿ ಟೈಮ್ಸ್
ಇ-ಪೇಪರ್ ಉಚಿತ
ಇಂದೇ ಹಂಪಿ ಟೈಮ್ಸ್ ವಾಟ್ಸ್‌ಪ್ ಚಾನಲ್‌ಗೆ ಸೇರಿ, ಇ-ಪೇಪರ್ ಉಚಿತವಾಗಿ ಪಡೆಯಿರಿ
www.hampitimes.com, epaper.hampitimes.com

freshies
fruit Ice Creams

FRESH AND NATURAL INGREDIENTS
NO CHEMICAL / COLOURS
Beside Medinova Hospital, ISR ROAD, Hosapete-583201
7036030603

Digital
PHOTOGRAPHY SERVICE
" CAPTURE YOUR PERFECT MOMENT "
WEDDING SHOOTING
FASHION SHOOTING
EVENT COVERAGE
BOOK NOW
9632121359

ಹಂಪಿ ಟೈಮ್ಸ್ ಚಾನಲ್
ವಿಜಯನಗರದ ಹೆಮ್ಮೆ
FREE!
hampitimes epaper
save your mobile space !
SCAN QR CODE TO JOIN FOLLOW
HAMPI TIMES
whatsapp channel

Advertising can also help to create or develop a distinctive brand for your business.
ನಿಮ್ಮ ಹೊಸ ಉತ್ಪನ್ನ ಬಿಡುಗಡೆಗಳು, ವಿಶೇಷ ಕೊಡುಗೆಗಳು ಮತ್ತು ಸುಧಾರಣೆಗಳ ಬಗ್ಗೆ ಹಾಗೂ ಪ್ರವೇಶ ಕುರಿತು ಸಂಭಾವ್ಯ ಮತ್ತು ಪ್ರಸ್ತುತ ಗ್ರಾಹಕರಿಗೆ ಮಾಹಿತಿ ನೀಡಲು ಬಯಸಿದ್ದೀರಾ?
ಇಂದೇ ಸಂಪರ್ಕಿಸಿ
ಹಂಪಿ ಟೈಮ್ಸ್ : ಮೊ: 9448633038


Happy Birtday
Happy birthday my daughter. Through these birthday wishes for daughter, mom and dad want you to know that you are the crown in our hearts.
ಶುಭ ಸಮಾರಂಭಗಳಿಗೆ ಇ-ಕಾರ್ಡ್ ಡಿಸೈನ್ ಮಾಡಿಕೊಡಲಾಗುವುದು
- ಹುಟ್ಟು ಹಬ್ಬ
- ಮದುವೆ
- ಹೊಸ ವರ್ಷ
- ಗ್ರಾಜ್ಯುಯೇಷನ್ ಡೇ
- ಪದವಿ ಸ್ವೀಕಾರ
- ನಿವೃತ್ತಿ
- ವಿದೇಶ ಪ್ರಯಾಣ
- ಸಾಧಕರಿಗೆ ಶುಭಾಶಯ
- ಹಬ್ಬ, ಆಚರಣೆಗಳು
- ಜಯಂತ್ಯೋತ್ಸವಗಳು
- ವಾರ್ಷಿಕೋತ್ಸವ
- ಗೃಹ ಪ್ರವೇಶ
- ಆಮಂತ್ರಣ
- ಬ್ರ್ಯಾಂಡಿಂಗ್ ಪೋಸ್ಟರ್ ಹಾಗೂ ಇತರೆ..

Digital E-Card@ Rs. 100/- Only !
For Info and Others
9380692661, 9448633038
www.hampitimes.com
epaper.hampitimes.com
Email:hampitimes@gmail.com

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA